ಕರ್ನಾಟಕ ವಿಧಾನಸಭೆ

ಗುರುವಾರ 01 ನೇ ಆಗಸ್ಟ್ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್):- ಅವರು ಪೀಠವನ್ನು ಅಲಂಕರಿಸಿದ್ದರು.

(ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದರು)

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:- ಶಾಸಕರಾದ ಶ್ರೀ ಮಂಜುನಾಥ್ ಸಿ. ಕುನ್ನೂರ್‌ರವರಿಗೆ ಅಸಿಸ್ಟೆಂಟ್ ಇಂಜಿನಿಯರಿಂದ ಕೊಲೆ ಬೆದರಿಕೆ.

ಅಧ್ಯಕ್ಷರು:- ಏಕೆ ಮತ್ತೆ ಎಲ್ಲರೂ ಸದನದ ಬಾವಿಗೆ ಬಂದಿದ್ದೀರಿ?

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ತಾವು ಅಧ್ಯಕ್ಷ ಪೀಠದಲ್ಲಿ ಇರಲಿಲ್ಲ. ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದಾಗ, ಮಾನ್ಯ ಶಾಸಕರಾದ ಶ್ರೀ ಮಂಜುನಾಥ್ ಸಿ. ಕುನ್ನೂರ್ ಅವರಿಗೆ ಎ.ಇ.ಇ. ಒಬ್ಬ, ನೀವೇನಾದರೂ ವಿಧಾನಸಭೆಯಲ್ಲಿ ಅಲ್ಲಿಯ ಅವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡಿದರೆ ನಾನು ನಿನ್ನನ್ನು ಶಾಸಕರ ಭವನದಲ್ಲೇ ಬಂದು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದರು ಎನ್ನುವಂಥದ್ದು ಪ್ರಸ್ತಾಪ ಆಯಿತು. ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಮಾನ್ಯ ಶಿವಪ್ಪನವರ ಮೇಲೆ ಅದಂತಹ ಹಲ್ಲೆ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು, ಮಾನ್ಯ ಅಪ್ಪಚ್ಚು ರಂಜನ್‌ರವರ ಮೇಲೆ ಅದಂತಹ ಹಲ್ಲೆ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು. ಮಾನ್ಯ ಜಯರಾಮ ಶೆಟ್ಟಿಯವರಿಗೆ ಮತ್ತು ಮಾನ್ಯ ಸಭಾಪತಿಯವರ ಮೇಲೆ ಸುಳ್ಳು ಕೇಸನ್ನು ಹಾಕಿದ ಯಾವ ಒಬ್ಬ ಸಬ್ ಇನ್ಸಪೆಕ್ಟರ್ ಅನ್ನು ವರ್ಗಾವಣೆ ಮಾಡಿದ್ದರೋ, ಅವನನ್ನು ಮತ್ತೆ ಅಲ್ಲೇ ನೇಮಿಸಿ, ಅವರು ಅಲ್ಲಿ ಕಿರುಕುಳ ಅನುಭವಿಸುತ್ತಿರುವುದನ್ನು ಪ್ರಸ್ತಾಪ ಮಾಡಿದೆವು, ಮಾನ್ಯ ಬಸವರಾಜ್‌ರವರ ಪ್ರಕರಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆವು. ಈ ರೀತಿಯ ವಿಷಯಗಳನ್ನು ಇಲ್ಲಿ ಮತ್ತೆ ಮತ್ತೆ ಹೇಳಿದ್ದೇವೆ. ನಿರ್ಭೀತಿಯಿಂದ ಪ್ರಮಾಣಿಕವಾಗಿ ಪ್ರಜಾಸತ್ತಾತ್ಮಕವಾದ ವ್ಯವಸ್ಥೆಯಲ್ಲಿ ನಾವು ನಮ್ಮ ಕರ್ತವ್ಯವನ್ನು ನಿಭಾಯಿಸಲು ಆಗದಿರುವಂತಹ, ಉಸಿರು ಕಟ್ಟುವಂತಹ ಪರಿಸ್ಥಿತಿ ಬಂದಿದೆ ಎನ್ನುವಂಥದ್ದು ನಮ್ಮ ಉದ್ದೇಶ. ನಾನು 1983 ರಿಂದ ಶಾಸಕನಾಗಿದ್ದೇನೆ. ಇಲ್ಲಿ ನಿಂತುಕೊಂಡು ಯಾವುದೋ ಅಧಿಕಾರಿಯ ಕಿರುಕುಳದಿಂದ ನಾವು ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎನ್ನುವಂತಹ ಒಂದು ಪರಿಸ್ಥಿತಿ ಹಿಂದೆಂದೂ ನಮಗೆ ಬಂದಿರಲಿಲ್ಲ. ಅಲ್ಲಿ ಇಲ್ಲಿ ಘಟನೆಗಳಾದಾಗ, ಸರ್ಕಾರ ಅದರ ಬಗ್ಗೆ ಗಮನ ಕೊಡುತ್ತಿತ್ತು, ಅಲ್ಲೇ ಅದನ್ನು ಸರಿಪಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದು ಕೊಳ್ಳುವಂಥದ್ದು ಆಗುತ್ತಿತ್ತು. ಆದರೆ ಇತ್ತೀಚಿನ ದಿವಸಗಳಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಸರ್ಕಾರಿ

ಕಛೇರಿಗಳಲ್ಲಿ ಗೌರವ ಸಿಗದಿರುವಂತಹ ಒಂದು ವಿಚಿತ್ರವಾದಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ದಯವಿಟ್ಟು ಆಡಳಿತ ಪಕ್ಷದವರು ತಪ್ಪು ತಿಳಿದುಕೊಳ್ಳಬೇಡಿ, ನಮಗೆ ಬಂದಿರುವಂತಹ ಅಭಿಪ್ರಾಯಗಳು ಮತ್ತು ಈ ತರಹ ನಾಲ್ಕೈದು ಘಟನೆಗಳನ್ನು ನೋಡಿದ ಮೇಲೆ, ಒಂದು ರೀತಿ ಪ್ರತಿ ಪಕ್ಷಗಳನ್ನು ಹತ್ತಿಕ್ಕುವಂತಹದಕ್ಕೆ ಎಲ್ಲಾ ರೀತಿಯ ಸಹಕಾರ ಆಡಳಿತ ಪಕ್ಷ ಕೊಡುತ್ತಿದೆ ಏನೋ ಎಂದು ಭಾವಿಸುವಂತಹ ಅನೇಕ ಉದಾಹರಣೆಗಳು ನಮಗೆ ಸಿಗುತ್ತಿವೆ. ಇವತ್ತು ನಾವು ಮಾನ್ಯ ಜಯರಾಮಶೆಟ್ಟಿ ಅವರಿಗೆ ಸಂಬಂಧಿಸಿದ ಘಟನೆಯೊಂದನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಅವರು ಕಣ್ಣೀರು ಹಾಕಿದಂತಹದು ಸರ್ಕಾರಕ್ಕೆ ತಿಳಿದಿದೆ. ಹಿಂದೆ ಒಂದು ವರ್ಗಾವಣೆ, ನೀವು ಏಕೆ ಮಾಡಿದಿರೊ ಗೊತ್ತಿಲ್ಲ, ನಿಮಗೆ ಮನವರಿಕೆಯಾದ ಮೇಲೆ ಅವನ ವರ್ಗಾವಣೆ ಮಾಡಿದಿರಿ, ವಾಪಸ್ ಅಲ್ಲಿಗೇ ಹಾಕಿದ್ದೀರಿ, ಇವತ್ತು ಸುಳ್ಳು ಕೇಸ್ ಹಾಕಿದ್ದೀರಿ. ಮಾನ್ಯ ಸಭಾಪತಿಯಂಥವರು ಮತ್ತು ಮಾನ್ಯ ಜಯರಾಮಶೆಟ್ಟಿಯಂಥವರು ಇಲ್ಲಿ ಕಣ್ಣೀರು ಹಾಕುವಂತಹ ಪರಿಸ್ಥಿತಿ ಬಂತು. ಈ ರೀತಿ ನಡೆದಿರುವುದು ಕೇವಲ 2-3 ಘಟನೆಗಳಲ್ಲ. ಮಾನ್ಯ ಬಸವರಾಜ್ ಮೇಲೆ ಹಲ್ಲೆ ಆಯಿತು, ಮಾನ್ಯ ಶಿವಪ್ಪನವರ ಮೇಲೆ ಹಲ್ಲೆ ಆಯಿತು. ನಮ್ಮ ಬಿಜಾಪುರದ ಶಾಸಕರಾದ ಬಸವನಗೌಡ ಪಾಟೀಲ್‌ಗೆ ಎಸ್.ಪಿ. ಯೊಬ್ಬ ಬಹಿರಂಗವಾಗಿ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟ. ನಾನು ಹೇಳುವಂಥದ್ದು, ಆಡಳಿತ ಪಕ್ಷದಲ್ಲಿ ಇರುವ ಶಾಸಕರಿಂದಾಗಲಿ, ಅಥವಾ ವಿರೋಧ ಪಕ್ಷದಲ್ಲಿ ಇರುವ ಶಾಸಕರಿಂದಾಗಲಿ ಏನೂ ತಪ್ಪಾಗುವುದಿಲ್ಲ ಎಂದು ನಾನು ಹೇಳುತ್ತಿಲ್ಲ. ತಪ್ಪಾದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬಾರದು ಎಂದು ನಾನು ಹೇಳುತ್ತಿಲ್ಲ. ಆದರೆ ಅಧಿಕಾರಿಗಳು ವಿನಾಕಾರಣ ಈ ತರಹ ಕಾಲು ಕೆದಕಿ ಅಪಮಾನ ಮಾಡುವಂಥದ್ದು ನಡೆಯುತ್ತಿದೆ. ನೂರಕ್ಕೆ ತೊಂಭತ್ತು ಜನ ಅಧಿಕಾರಿಗಳು ಒಳ್ಳೆಯವರಿದ್ದರೂ ಸಹ ಇನ್ನು ಹತ್ತು ಜನ ಈ ರೀತಿಯವರು ಇದ್ದರೆ ಸರ್ಕಾರಕ್ಕೆ ಹೇಗೆ ಗೌರವ ಬರುತ್ತದೆ? ನನಗೆ ಅರ್ಥವಾಗದಿರುವಂತಹ ಸಂಗತಿ ಅಂದರೆ, ಸರ್ಕಾರ ಇದನ್ನು ಏಕೆ ಪ್ರತಿಷ್ಠೆಯ ವಿಷಯವನ್ನಾಗಿ ತೆಗೆದುಕೊಂಡಿದೆ? ಮಾನ್ಯ ಯಡಿಯೂರಪ್ಪನವರೇ, ಯಾರೋ ಒಬ್ಬ ಶಾಸಕ ಇಲ್ಲಿ ಈ ರೀತಿ ಆರೋಪ ಮಾಡಿದ್ದಾರೆ, ಅದಕ್ಕೆ ಸಾಕ್ಷ್ಯಾಧಾರಗಳು ಏನು ಎಂದು ತಾವು ಕೇಳಬಹುದು. ಸ್ವಾಮಿ, ಇದಕ್ಕೆಲ್ಲಾ ಸಾಕ್ಷ್ಯಾಧಾರಗಳು ಸಿಗುವುದಿಲ್ಲ. ಇವತ್ತು ಶಾಸಕರ ಬಗ್ಗೆ ನಿಮಗೇನಾದರೂ, ಈ ವ್ಯವಸ್ಥೆಯಲ್ಲಿ ಗೌರವ ಇದ್ದರೆ, ಕ್ರಮ ಕೈಗೊಳ್ಳಿ. ಆಡಳಿತ ಪಕ್ಷಕ್ಕೆ, ನಾವು ಪ್ರಾಮಾಣಿಕವಾಗಿ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇವೆ. ಆದರ ಮಹತ್ವವನ್ನು ಅರ್ಥಮಾಡಿಕೊಂಡು, ತಕ್ಷಣ ಅದಕ್ಕೆ ಚುರುಕು ಮುಟ್ಟಿಸಿ, ಈ ರೀತಿ ರಿಪೀಟ್ ಆಗದಂತೆ ನೋಡಿಕೊಳ್ಳಬಹುದು. ನಿನ್ನೆ ದಿವಸ ಮಾನ್ಯ ಖರ್ಗೆಯವರು ಹೇಳಿದರು. ರಾಜಕಾರಣ ಶಾಶ್ವತವೇನಲ್ಲ. ಇವತ್ತು ಅಲ್ಲಿರುವವರು ಇಲ್ಲಿರುತ್ತೇವೆ, ಇಲ್ಲಿರುವವರು ಅಲ್ಲಿರುತ್ತೇವೆ ಎಂದು. ನಾವು ಶಾಶ್ವತವಾಗಿ ಗೂಟ ಬಡಿದುಕೊಂಡು ಅಧಿಕಾರದಲ್ಲಿ ಇರುವುದಿಲ್ಲ. ಆದರೆ ಯಾರಿಗೂ ಈ ರೀತಿಯ ಒಂದು ಹಿಂಸೆ ಆಗಬಾರದು. ಜನ ಪ್ರತಿನಿಧಿಗಳೇ ರಕ್ಷಣೆ ಕೇಳಿ ಈ ಸದನದಲ್ಲಿ ಮಾತನಾಡುವಂತಹ ಹೀನ ಸ್ಥಿತಿ ಬಂದಿರುವಂಥದ್ದು ನಿಜಕ್ಕೂ ಸಂಕಟ ತರುವಂತಹ ಸಂಗತಿ. ಸ್ವಾಮಿ, ಇದು ಒಂದು ಭಾಗ. ಇನ್ನೊಂದು ಭಾಗವನ್ನೂ ಹೇಳುತ್ತೇನೆ. ಇಲ್ಲಿ ಪ್ರಾಮಾಣಿಕವಾಗಿ ಯಾವುದೋ ಒಂದು

ನ್ಯಾಯ ಬೆಲೆ ಅಂಗಡಿಯಲ್ಲಿ ಕಳಪೆ ಅಕ್ಕಿ ವಿತರಣೆಯಾಗುತ್ತಿದೆ ಎಂದು ತಂದು ಕೊಟ್ಟರೆ, ಆತನ ಅಂಗಡಿಯನ್ನು ರದ್ದು ಮಾಡಿದಿರಿ. ಹೀಗಾದರೆ ಶಾಸಕರಾಗಿ ನಾವು ಕೆಲಸ ಮಾಡುವುದು ಹೇಗೆ? ಅಧಿಕಾರಿಗಳು ಈ ತರಹ ಮಾಡಿದರೆ, ಕೇಸ್‌ಗಳನ್ನು ಇವರ ಮೇಲೆ ಹಾಕುವುದಾದರೂ ಹೇಗೆ? ಇದು ಎಲ್ಲಿಗೆ ಮುಟ್ಟುತ್ತದೆ? ಮಾನ್ಯ ಅಪ್ಪಚ್ಚು ರಂಜನ್‌ರವರು ಯಾವುದೋ ಇನ್ಸ್‌ಟಿಟ್ಯೂಷನ್ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರು. ಅವರಿಗೆ ಕೊಲೆ ಬೆದರಿಕೆಗಳು ಬರುತ್ತಿವೆ. ಅದಕ್ಕೆಲ್ಲಾ ನೀವು ಉತ್ತರ ಕೊಡಿ ಎಂದು ನಾನು ಹೇಳುವುದಿಲ್ಲ. ಅದನ್ನು ಅಲ್ಲಿ ಎದುರಿಸುತ್ತೇವೆ. ನಾವು ಇಲ್ಲಿ ಸನ್ಮಾನ್ಯ ಅಧ್ಯಕ್ಷರಿಗೆ ನಮಗೆ ರಕ್ಷಣೆ ಬೇಕು ಎಂದು ಕೇಳುತ್ತಿಲ್ಲ; ಇದನ್ನು ಸರ್ಕಾರದ ಗಮನಕ್ಕೆ ತಂದು, ಅವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳೋಣ. ಇಲ್ಲ, ನಾವು ಅಧಿಕಾರಿಗಳ ಪರ ಇದ್ದೇವೆ, ನಮ್ಮ ಉದ್ದೇಶವೇ ಪ್ರತಿ ಪಕ್ಷಗಳನ್ನು ಹತ್ತಿಕ್ಕುವಂಥದ್ದು, ಇದನ್ನು ಅಸ್ತ್ರವಾಗಿ ಉಪಯೋಗ ಮಾಡಿದ್ದೇವೆ ಎನ್ನುವ ಧೋರಣೆ ನಿಮ್ಮದು ಇಲ್ಲ ಎಂದು ನಾವು ತಿಳಿದು-ಕೊಂಡಿದ್ದೇವೆ. ಅದೇ ಧೋರಣೆ ಇದೆ ಎಂದು ನಮಗೆ ಯಾವಾಗ ಅನ್ನಿಸುತ್ತದೆ, ನಿನ್ನೆ ದಿವಸ ತಾವು ಏನು ಹೇಳಿದಿರಿ, ನಾವಿಲ್ಲಿ ಪ್ರಸ್ತಾಪ ಮಾಡಿದೆವು, ಸದನದ ಕಾರ್ಯ ಕಲಾಪ ಮುಗಿಯುವ ಹಂತಕ್ಕೆ ಬಂದಿದೆ, ಇನ್ನೊಂದು ಗಂಟೆ ಅಥವಾ ಒಂದೂವರೆ ಗಂಟೆ, ರಾತ್ರಿ 9 ಗಂಟೆಯವರೆಗೆ ಬೇಡಿಕೆಗಳ ಬಗ್ಗೆ ಡಿಸ್ಕಷನ್ ಆಗಬೇಕು ಎನ್ನುವುದನ್ನು ಒಪ್ಪಿಕೊಂಡು ನಾವು ಇಲ್ಲಿ ಕುಳಿತುಕೊಳ್ಳಲಿಕ್ಕೆ ಸಿದ್ಧರಾಗಿದ್ದೆವು. ಈ ಪ್ರಸ್ತಾಪ ಬಂದಾಗ, ತಾವು ಎದ್ದು ನಿಂತುಕೊಂಡು, ಇಲ್ಲ, ಒಬ್ಬ ಶಾಸಕ ಜವಾಬ್ದಾರಿ ಇರುವಂತಹ ಆಡಳಿತ ಪಕ್ಷದಲ್ಲಿ ಇದ್ದು ಅಧಿಕಾರ ನಡೆಸಿದಂತಹ, ಕಾಂಗ್ರೆಸ್ ಪಕ್ಷದ ಒಬ್ಬ ಶಾಸಕರು ಜವಾಬ್ದಾರಿ-ಯಿಂದ ಆ ಮಾತನ್ನು ಹೇಳಿದಾಗ, ಆವನನ್ನು ಕರೆಸುತ್ತೇವೆ, ಇದು ಮೇಲ್ನೋಟಕ್ಕೆ ನಮಗೆ ಸರಿ ಅನ್ನಿಸುತ್ತಿದೆ, ಎನ್‌ಕ್ವೈರಿ ಮಾಡುತ್ತೇವೆ, ಆವನನ್ನು ಸಸ್ಪೆಂಡ್ ಮಾಡುತ್ತೇವೆ, ಈ ತರಹ ಆಗುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು, ಮತ್ತೆ ನಾವು ಕಾರ್ಯಕಲಾಪಗಳನ್ನು ಮುಂದುವರೆಸಿಕೊಂಡು ಹೋಗಬಹುದಾಗಿತ್ತು. ಅಂದರೆ ಇವತ್ತು ಯಾರೋ ಒಬ್ಬ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡರೆ, ಇಡೀ ಅಧಿಕಾರ ವರ್ಗವೇ ಸರ್ಕಾರದ ವಿರುದ್ಧ ತಿರುಗಿ ಬೀಳುತ್ತ-ದೆಯೇ? ಇದು ಸಾಧ್ಯವೇ ಅಥವಾ ಎಲ್ಲಾ ಅಧಿಕಾರಿಗಳ ಮೇಲೆ ನಾವೇನಾದರೂ ಈ ತರಹದ ಆರೋಪಗಳನ್ನು ಮಾಡುತ್ತಿದ್ದೇವೆಯೇ? ಇದನ್ನು ಅರ್ಥ ಮಾಡಿಕೊಳ್ಳದೆಯೇ ನಮ್ಮನ್ನು ಈ ತರಹದ ಒಂದು ಪರಿಸ್ಥಿತಿಗೆ ತಂದಿಟ್ಟಿರುವುದು ಸರಿಯೇ? ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಅನೇಕ ಸಲ ಹೇಳುತ್ತಿರುತ್ತಾರೆ, ಧರಣಿ ಕುಳಿತುಕೊಳ್ಳುವುದು, ವಾಕೌಟ್ ಮಾಡುವುದನ್ನು ಬಿಟ್ಟು ಪ್ರತಿ ಪಕ್ಷದವರು ಇನ್ನೇನೂ ಮಾಡಲಿಲ್ಲ ಎಂದು. ಇವತ್ತು ಅನೇಕ ಪ್ರಮುಖವಾದಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಕೆ.ಇ.ಬಿ. ವಿದ್ಯುತ್ ದರ ಏರಿಕೆ ಬಗ್ಗೆ ಸದನ ಸಮಿತಿ ಸಭೆಯಲ್ಲಿ ಚರ್ಚೆ ಆಗುವಂತಹ ಕಾಲದಲ್ಲಿ ಸರ್ವಾನುಮತದಿಂದ ಒಂದು ತೀರ್ಮಾನವನ್ನು ತೆಗೆದುಕೊಂಡು, ತಮಗೆ ಒಪ್ಪಿಸುವಂತಹ ಕೆಲಸ ಮಾಡಿದ್ದೇವೆ. ಏಕೆ? ಕೆ.ಇ.ಬಿ., ಕೆ.ಪಿ.ಸಿ., ರಾಜ್ಯ, ಜನತೆ, ಗ್ರಾಹಕರು ಉಳಿಯ-ಬೇಕು ಎಂಬ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. ಈ ಧಾರಾಳತನ ಯಾರೂ ಮಾಡಲಿಲ್ಲ.

ಇದರಲ್ಲಿ ನಾವು ರಾಜಕೀಯ ಲಾಭ ಮಾಡಿಕೊಳ್ಳಲಿಕ್ಕೆ ಹೋಗಲಿಲ್ಲ. ಮಾನ್ಯ ಶಿವಪ್ಪನವರ ಮೇಲೆ ಹಲ್ಲೆ ಆಯಿತು, ಅಪಮಾನಕರವಾದಂತಹ ಘಟನೆಗಳು ಆಯಿತು, ಮಾನ್ಯ ಅಪ್ಪಚ್ಚು ರಂಜನ್‌ರವರ ಮೇಲೆ ಆಯಿತು, ಇವತ್ತು ಏನೂ ಗೊತ್ತಿಲ್ಲದ ಮಾನ್ಯ ಜಯರಾಮಶೆಟ್ಟರು ಇಲ್ಲಿ ಕಣ್ಣೀರು ಹಾಕುವಂತಹ ಪರಿಸ್ಥಿತಿ ಬಂತು, ಮಾನ್ಯ ಸಭಾಪತಿಯವರದ್ದು ಹೇಳಿಯಾಯಿತು, ಮಾನ್ಯ ಬಸವರಾಜ್ ರವರ ಪ್ರಕರಣದ ಬಗ್ಗೆ ಹೇಳಿಯಾಯಿತು. ಸ್ವಾಮಿ, ಈ ಪರಿಸ್ಥಿತಿ ಮುಂದುವರೆಯಬೇಕು ಎನ್ನುವುದಾದರೆ, ನೀವು ಹೀಗೆಯೇ ಸರ್ಕಾರ ನಡೆಸಿಕೊಂಡು ಹೋಗುವುದಾದರೆ, ತಮ್ಮ ದಾರಿ ತಮಗೆ ಎನ್ನುವುದಾದರೆ, ಅನಿವಾರ್ಯವಾಗಿ ನಾವು ಇವತ್ತು ನಿನ್ನೆ ಧರಣಿ ನಡೆಸಬೇಕಾಯಿತು. ಸಹಜವಾಗಿ ಮಾನ್ಯ ಉಪಾಧ್ಯಕ್ಷರು ಎಲ್ಲಾ ವಿಷಯಗಳನ್ನು ಮಾನ್ಯ ಅಧ್ಯಕ್ಷರಿಗೆ ಹೇಳಿರಬಹುದು. ನಮ್ಮನ್ನು ಕರೆಸುತ್ತೀರಿ ಮಾತನಾಡಿ ಇದನ್ನು ಬಗೆಹರಿಸಿ ನಮ್ಮ ಕಾರ್ಯಕಲಾಪಗಳ ಕಡೆಗೆ ಗಮನಕೊಡಬೇಕು ಅನ್ನುವುದು ನನ್ನ ಅಪೇಕ್ಷೆ ಇತ್ತು. ಅದಕ್ಕೆ ಅಧ್ಯಕ್ಷರು ಏನು ಮಾಡುತ್ತಾರೆ? ಸರ್ಕಾರ ಆಸಕ್ತಿ ವಹಿಸದಿದ್ದರೆ, ಸನ್ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ನಾವು ನಿಮ್ಮ ಕೊಠಡಿಗೆ ಬರುವುದನ್ನು ಬಿಟ್ಟು ಬಿಡುತ್ತೇವೆ, ಇದರ ಬಗ್ಗೆ ನಾವು ತೀರ್ಮಾನ ಮಾಡಿದ್ದೇವೆ, ಏನಿದ್ದರೂ ಇಲ್ಲೇ ತೀರ್ಮಾನವಾಗಬೇಕು, ತಾವು ತುಂಬಾ ಧಾರಾಳತನದಿಂದ ಕೆಲವು ಪ್ರಮುಖ ವಿಷಯಗಳು ಚರ್ಚೆಯಾಗಬೇಕು ಎನ್ನುವುದರ ಬಗ್ಗೆ ತಾವೇನೋ ಕರೆಯಿಸಿ ಮಾತುಕತೆ ಆಡುತ್ತೀರಿ. ಇತ್ತೀಚಿನ ದಿವಸಗಳಲ್ಲಿ ನಿಮ್ಮ ಮಾತಿಗೂ ಗೌರವ ಬರುತ್ತಿಲ್ಲವಲ್ಲ! ನಿಮ್ಮನ್ನೂ ಸಹ ನಾವು ಸಂದಿಗ್ಧದಲ್ಲಿ ಸಿಕ್ಕಿಸುತ್ತಿದ್ದೇವೇನೋ ಎಂದು ನಮಗೆ ಅನ್ನಿಸಿ ಬಿಟ್ಟಿದೆ. ಮೊನ್ನೆ ಒಂದು ಸಲ ಆದಂತಹ ಘಟನೆಗೆ ಸರ್ಕಾರ ಯಾವುದೇ ಒಂದು ಉತ್ಸಾಹವನ್ನೂ ತೋರಿಸಲಿಲ್ಲ. ಈ ಘಟನೆ ಆದ ಮೇಲೆ ನನಗೆ ಅನ್ನಿಸುತ್ತದೆ, ಬಹುಶಃ ಅವರು ತಮ್ಮ ಕೊಠಡಿಗೆ ಬಂದು ಸಮಸ್ಯೆ ಬಗೆಹರಿಸಿಕೊಳ್ಳುವುದಕ್ಕೂ ಸಿದ್ಧ ಇಲ್ಲ; ಇಲ್ಲೂ ಸಹ ಒಂದು ರೀತಿ ರಾಜಕೀಯ ಒಣ ಪ್ರತಿಷ್ಠೆ ಮಾಡಿಕೊಂಡು, ನಮ್ಮನ್ನು ಸಂದಿಗ್ಧದಲ್ಲಿ ಸಿಕ್ಕಿಸಿ, ಕೆಲಸ ಮಾಡುವುದಕ್ಕೆ ಆಗದಿರುವಂತಹ ಉಸಿರು ಕಟ್ಟಿಸುವ ಪರಿಸ್ಥಿತಿ, ಅಧಿಕಾರಿಗಳ ಮುಂದೆ ನಮ್ಮನ್ನು, ಚುನಾಯಿತ ಪ್ರತಿನಿಧಿಗಳನ್ನು ನಗೆಪಾಟಲಿಗೆ ಈಡಾಗಿಸುವಂತಹ ಒಂದು ವ್ಯವಸ್ಥಿತ ಷಡ್ಯಂತ್ರ, ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಂಡು, ಪ್ರತಿ ಪಕ್ಷವನ್ನು ಹತ್ತಿಕ್ಕುವುದಕ್ಕೆ ನೀವು ಸಿದ್ಧವಾಗುವುದಾದರೆ, ನೀವು ಹೇಗೆ ಬೇಕಾದರೂ ಸರ್ಕಾರ ನಡೆಸಿ, ನಮ್ಮ ದಾರಿಯನ್ನು ನಾವು ನೋಡಬೇಕಾಗುತ್ತದೆ, ಹಾಗೆಯೇ ಮಾಡೋಣ ಸ್ವಾಮಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಿನ್ನೆ ತಾವು ಇರಲಿಲ್ಲ. ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು. ಆ ಸಮಯದಲ್ಲಿ ಮಾನ್ಯ ಶಾಸಕರಾದ ಮಂಜುನಾಥ್ ಸಿ. ಕುನ್ನೂರ್‌ರವರು ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ಸಹಜವಾಗಿ ಅವರ ಮತ ಕ್ಷೇತ್ರದಲ್ಲಿ ನಡೆದಂತಹ ಘಟನೆಗಳ ಬಗ್ಗೆ ಮತ್ತು ಅಧಿಕಾರ ವರ್ಗದವರು ಆದರಲ್ಲೂ ವಿಶೇಷವಾಗಿ ಒಬ್ಬ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಯಾವ ರೀತಿಯಾಗಿ ಅವರ ಜೊತೆಯಲ್ಲಿ ವರ್ತನೆ ಮಾಡಿದ ಎಂಬುದರ ಬಗ್ಗೆ ಅವರು ಹೇಳುತ್ತಿದ್ದರು. ಈ ಪರಿಸ್ಥಿತಿ ಎಲ್ಲಾ ಕಡೆ ಇದೆ ಎನ್ನತಕ್ಕಂತಹ ಒಂದು ಗಂಭೀರವಾದ ಆರೋಪವನ್ನು ಸರ್ಕಾರದ ಮೇಲೆ ನಾವು ಅನೇಕ ಸಲ

ಮಾಡಿದ್ದೇವೆ. ಆದರೆ ಒಬ್ಬ ಆಧಿಕಾರಿ ಒಬ್ಬ ಶಾಸಕನಿಗೆ ಅಸೆಂಬ್ಲಿಯಲ್ಲಿ ನನ್ನ ವಿರುದ್ಧ ಮಾತನಾಡಿದರೆ ನಾನು ಅವನಿಗೆ ಶಾಸಕರ ಭವನದಲ್ಲಿ ನೋಡಿಕೊಳ್ಳತಕ್ಕಂತಹ ಶಕ್ತಿ ಮತ್ತು ಜಿಲ್ಲೆಯಲ್ಲಿ ಅವನನ್ನು ನೋಡಿಕೊಳ್ಳತಕ್ಕಂತಹ ಶಕ್ತಿ ನನಗೆ ಇದೆ ಎನ್ನತಕ್ಕಂತಹ ಮಾತನ್ನು ಹೇಳಿ ಅವನು ಹೆದರಿಸಬೇಕಾದರೆ ಎಷ್ಟು ಅವನಿಗೆ ರಾಜಕೀಯವಾಗಿ ಬೆಂಬಲ ಇರಬಹುದು ಎನ್ನತಕ್ಕಂಥದ್ದು ಇದರಿಂದ ಗೊತ್ತಾಗುತ್ತದೆ. ಆ ಪೊಲಿಟಿಕಲ್ ಬ್ಯಾಕಿಂಗ್ ಅವನಿಗೆ ಇರದಿದ್ದರೆ ಬಹುಶಃ ಇಂತಹ ಮಾತು ಯಾವ ಆಧಿಕಾರಿ ಬಾಯಿಯಿಂದ ಬರುವುದಕ್ಕೆ ಸಾಧ್ಯವಿಲ್ಲ. ಒಂದು ರಾಜಕೀಯ ಬೆಂಬಲದಿಂದ ಇವತ್ತು ಆ ಶಕ್ತಿಯನ್ನು ಪಡೆದುಕೊಂಡು ಇವತ್ತು ಆ ಮಾತನ್ನು ಆಡಿದ್ದಾನೆ ಎನ್ನತಕ್ಕಂತಹ ಮಾತನ್ನೂ ಕೂಡ ನಾನು ಹೇಳ-ಬಯಸುತ್ತೇನೆ, ಮತ್ತು ಸಂಬಂಧಪಟ್ಟಂತಹ ಸಚಿವರೂ ಕೂಡ ಈ ಮಾತನ್ನು ಒಪ್ಪಿಕೊಳ್ಳುತ್ತಾರೆ. ಆ ಜಿಲ್ಲೆಯವರು ಅವನ ವರ್ತನೆ ಸರಿ ಇಲ್ಲ ಎನ್ನತಕ್ಕಂತಹ ಮಾತು ಅಪ್ರತ್ಯಕ್ಷವಾಗಿ ಕುನ್ನೂರು ಅವರಿಗೆ ಭೇಟಿಯಾದಾಗ ತಿಳಿಸಿದ್ದಾರೆ. ಇಂತಹವರನ್ನು ತೆಗೆದು ಹಾಕಬೇಕು, ಇಡಬಾರದು ಎಂದು ಅವರೇ ಹೇಳಿದ್ದಾರೆ. ಹೇಳಿದ ಮೇಲೆ ಕೂಡ ಇವತ್ತು ಅವನ ಬಗ್ಗೆ ಇಂತಹ ಪ್ರೀತಿ ಏಕೆ ಹುಟ್ಟಿತು ನನಗೆ ಗೊತ್ತಿಲ್ಲ. ಯಾರು ತಪ್ಪು ಮಾಡಿದ್ದಾರೆ ಎಂದರೆ ನೀವು ಶಿಕ್ಷೆ ಕೊಡುವುದಕ್ಕೆ ತಯಾರಿಲ್ಲ. ಇದರಲ್ಲಿ ಪ್ರತಿಷ್ಟೆ ಪ್ರಶ್ನೆ ಏನು ಇದೆ, ಒಬ್ಬ ಶಾಸಕನಿಗೆ ಈ ರೀತಿಯಾಗಿ ಆಗಿದೆ ಎಂದರೆ, ಅದೇ ರೀತಿಯಾಗಿ ಐದಾರು ಶಾಸಕರ ಹೆಸರುಗಳನ್ನು ಈಗಾಗಲೇ ಯಡಿಯೂರಪ್ಪನವರು ಹೇಳಿದರು. ಮತ್ತು ಅನೇಕ ಶಾಸಕರು ಯಾರೂ ತಮ್ಮ ವಿಷಯಗಳನ್ನು ಪ್ರಸ್ತಾಪ ಮಾಡಲಿಲ್ಲ. ಏಕೆಂದರೆ ಸಂದರ್ಭ ಬಂದಾಗ ಅವರು ಹೇಳಿಕೆಗಳನ್ನು ಈ ಸದನದ ಮುಂದಿಡುತ್ತಾರೆ. ಆದರೆ ಅನೇಕ ಜನ ಆ ನೋವನ್ನು ನುಂಗಿ-ಕೊಂಡು ಇವತ್ತು ಕೂತಿದ್ದಾರೆ. ಅಂತಹ ಒಂದು ಸಂದರ್ಭದಲ್ಲಿ ಪ್ರಸ್ತಾಪ ಬಂದಾಗ ನಾನು ತಕ್ಷಣ ಕ್ರಮ ತೆಗೆದುಕೊಂಡು ಸರಿಪಡಿಸುತ್ತೇನೆ ಎಂದು ಹೇಳಬೇಕು ಅವರಿಗೆ ಏನು ಸಸ್ಪೆಂಡ್ ಮಾಡಿದ್ದರೆ ಆಕಾಶ ಕಡಿದು ಬೀಳುತ್ತಿರಲಿಲ್ಲ. ಮೊನ್ನೆ ನಾವು ಇದೇ ಸದನದಲ್ಲಿ ಸೂಲನಾಯಕನ ಹಳ್ಳಿಯಲ್ಲಿ ನಮ್ಮ ಪಾವಗಡ ತಾಲ್ಲೂಕಿನಲ್ಲಿ ಆದಂತಹ ಘಟನೆಯ ಬಗ್ಗೆ ಉಲ್ಲೇಖಿತಕ್ಕಂತಹ ಸಬ್ ಇನ್‌ಸ್ಪೆಕ್ಟರ್ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದಾಗ ತಕ್ಷಣ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆ ಮೇಲೆ ಮೊನ್ನೆ ನಮ್ಮ ಯಲಹಂಕ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಆದಂತಹ ಒಂದು ಘಟನೆ ಏನಿದೆ, ಅರಕೆರೆ ಘಟನೆ. ಆ ಅರಕೆರೆಯಲ್ಲಿ ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ಮಾಡಿದಂತಹ ತಪ್ಪಿಗೆ ತಾವು ಇವತ್ತು ಇಮ್ಮಿಡಿಯಟ್‌ಲಿ ಸಸ್ಪೆಂಡ್ ಮಾಡಬೇಕೆಂದು ಹೇಳಿದಾಗ ಎದ್ದು ನಿಂತು ಶ್ರೀಮಾನ್ ರೋಷನ್ ಬೇಗ್‌ರವರು ಇದೇ ಹೌಸ್‌ನಲ್ಲಿ ಅವರಿಗೆ ಸಸ್ಪೆಂಡ್ ಮಾಡುತ್ತೇವೆಂದು ಹೇಳಿದರು. ಇದು ಈ ಸದನದಲ್ಲಿ ಆದಂತಹ ಘಟನೆ. ಏನೂ ಹೊಸದಾಗಿ ನಾವು ಕೇಳುತ್ತಿಲ್ಲ. ಇದರ ಹಿಂದೆ ಕೂಡ ಅಸಿಸ್ಟೆಂಟ್ ಎಜ್ಯುಕೇಷನ್ ಆಫೀಸರ್ ಬಗ್ಗೆ ಆಪಾದನೆ ಮಾಡಿದಾಗ ಇಲ್ಲಿ ತಕ್ಷಣ ಸಸ್ಪೆಂಡ್ ಮಾಡು-ತ್ತೇವೆಂದು ಹೌಸ್‌ನಲ್ಲಿ ಹೇಳಿದರು. ಎಲ್ಲಾ ಆಫೀಸರ್ಸ್ ಹೆಸರು ತೆಗೆದುಕೊಂಡ ತಕ್ಷಣ ಸಸ್ಪೆಂಡ್ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಯಾವ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲ. ನೀವು ನೂರಾರು ಹೆಸರು ತೆಗೆದುಕೊಂಡಿರಿ, ಆದರೆ ಇಂತಹ ಅಪರಾಧದ ಘಟನೆ ನಡೆದಾಗ ಇಂತಹ

ಶಾಸಕನ ಕೊಲೆ ಬೆದರಿಕೆಯನ್ನು ಒಬ್ಬ ಅಧಿಕಾರಿ ಮಾಡುವಾಗ ನೀವು ಅವನ ಮೇಲೆ ಕ್ರಮ ತೆಗೆದು-ಕೊಳ್ಳುವುದಕ್ಕೆ ಇಲ್ಲಿ ಸಾಧ್ಯವಿಲ್ಲ ಎಂದರೆ ಯಾವಾಗ ನೀವು ಮಾಡುತ್ತೀರಿ? ಅವನ ಜೀವ ಹೋದ ಮೇಲೆ ಮಾಡುತ್ತೀರೋ? ಡಾ।। ಚಿತ್ತರಂಜನ್ ಹಾಗೆ ಕೊಲೆ ಆದ ಮೇಲೆ ಸಸ್ಪೆಂಡ್ ಮಾಡತಕ್ಕಂಥದ್ದು ಎನ್‌ಕ್ವೈರಿ ಮಾಡತಕ್ಕಂಥದ್ದು ಮಾಡುತ್ತೀರಿ. ಇವತ್ತು ಈ ರೀತಿಯಾಗಿ ಘಟನೆಗಳು ನಡೆದರೆ ಅದಕ್ಕೆ ಸರ್ಕಾರದಿಂದ ಪ್ರೋತ್ಸಾಹ ಸಿಕ್ಕರೆ ಖಂಡಿತವಾಗಿ ಯಾವ ಶಾಸಕನಿಗೂ ಕೂಡ ರಕ್ಷಣೆ ಇಲ್ಲ. ನಾವು ಹೊರಗಡೆ ಅಂತೂ ಹೇಳುವ ಹಾಗೆ ಇಲ್ಲ. ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳಬಹುದು, ಅವರು ನಮಗೆ ಬೈಯುತ್ತಾರೆ, ನಾವು ಅವರಿಗೆ ಬೈಯುತ್ತೇವೆ ರಾಜಕೀಯವಾಗಿ ಮಾಡಬಹುದು ಎಂದು. ಆದರೆ ಈ ಸದನದಲ್ಲಿ ನಮ್ಮ ಹಕ್ಕಿನ ರಕ್ಷಣೆ ಮಾಡತಕ್ಕಂತಹ ಜವಾಬ್ದಾರಿ ಕೂಡ ತಮ್ಮ ಮೇಲೆ ಇದೆ. ನಾವು ಎಲ್ಲಿ ಮೊರೆ ಹೊಗಬೇಕು? ಯಾರಿಗೆ ಕೇಳಬೇಕು? ನಾವು ನಿಮಗೆ ಕೇಳಿಕೊಳ್ಳಬೇಕು, ಸರ್ಕಾರಕ್ಕೆ ಕೇಳುತ್ತೇವೆ, ಸರ್ಕಾರ ಮಾಡಲಿಲ್ಲ ಎಂದರೆ ತಾವೇ ನಮ್ಮ ರಕ್ಷಣೆ ಮಾಡಬೇಕೆಂದು ನಿಮಗೆ ನಾವು ಶರಣು ಬರತಕ್ಕಂಥದ್ದು. ಹಾಗಾಗಿ ನೀವೂ ಕೂಡ ನಮಗೆ ರಕ್ಷಣೆ ಮಾಡಲಿಲ್ಲ ಎಂದರೆ ನಾವು ಏನು ಮಾಡಬೇಕು, ಯಾವ ಹಾದಿಯಲ್ಲಿ ಮನೆಗೆ ಹೋಗಬೇಕು, ಯಾವ ದಿಕ್ಕಿನಲ್ಲಿ ಹೋಗಬೇಕು ಎನ್ನು-ವುದರ ಬಗ್ಗೆ ತಾವೇ ನಮಗೆ ಮಾರ್ಗದರ್ಶನ ಮಾಡಬೇಕು, ಇದು ಒಬ್ಬರು ಇಬ್ಬರ ಪ್ರಶ್ನೆ ಅಲ್ಲ. ಇಡೀ ಸದನದ ಸದಸ್ಯರ ಗೌರವದ ಪ್ರಶ್ನೆ. ಇವತ್ತು ಅವರಿಗೆ ಮಾಡಿದ ಹಾಗೆ, ನಾಳೆ ಇನ್ನೊಬ್ಬರಿಗೆ ಮಾಡು-ತ್ತಾರೆ. ಈ ಪರಿಸ್ಥಿತಿ ಅವರಿಗೂ ಕೂಡ ಇನ್ನೊಂದು ಸಲ ಬರಬಹುದು. ಆದ್ದರಿಂದ ಈ ರೀತಿ ಯಾರೇ ಮಾಡಿದರೂ ಕೂಡ ನಾವು ಖಂಡಿಸುತ್ತೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂತಹ ಮಾತನ್ನು ಅವರು ಹೇಳಿದ್ದರೆ ನಮ್ಮೆಲ್ಲರಿಗೂ ಕೂಡ ಗೌರವ ಬರತಕ್ಕಂತಹ ರೀತಿಯಲ್ಲಿ ಅದು ಬಗೆ-ಹರಿಯುತ್ತಿತ್ತು. ನಾವು ಸದನದ ಸಮಯವನ್ನು ಹಾಳು ಮಾಡಬೇಕೆಂದು ಏನೂ ಪ್ರಯತ್ನ ಮಾಡ-ಲಿಲ್ಲ. ಇದು ಆಕಸ್ಮಾತ್ ಆಗಿ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಬಂದಂತಹ ಘಟನೆ. ಅದರ ನಂತರ ಆದಂತಹ ಒಂದು ಧರಣಿ, ನಾವು ತಾವು ಹೇಳಿದ ಮೇಲೆ ಅನೇಕ ಇಷ್ಯೂಸ್‌ಗಳ ಮೇಲೆ ನಾವು ನಿಮ್ಮ ಕೊಠಡಿಯಲ್ಲಿ ಬಂದು ಕಾಂಪ್ರಮೈಸ್ ಮಾಡಿ ಅವರು ಹೇಳಿದ ಹಾಗೆ ಕೆ.ಇ.ಬಿ. ಇರ-ಬಹುದು ಗ್ರಾಮ ಪಂಚಾಯಿತಿ ಸದಸ್ಯರದ್ದೇ ಇರಬಹುದು, ಕಾವೇರಿ ವಾಟರ್ ಇಷ್ಯೂ ಇರಬಹುದು, ಆಲಮಟ್ಟಿ ಇರಬಹುದು, ಇಂತಹ ಗಂಭೀರವಾದ ಸಮಸ್ಯೆಗಳ ಬಗ್ಗೆ ತಾವು ಕರೆದಾಗೆಲ್ಲಾ ನಾವು ಸಹಕಾರ ಕೊಟ್ಟು ಸದನವನ್ನು ನಡೆಸತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ. ಇಷ್ಟಾದರೂ ಕೂಡ ಇವತ್ತು ಪುನಃ ನಮ್ಮ ಮೇಲೆ ಗೂಬೆ ಕೂರಿಸತಕ್ಕಂಥದ್ದು ಸರಿಯಲ್ಲ. ಈಗ ಏನು 25 ಜನ ಬಂದಿರಬಹುದು ತಾವು ಏಣಿಸಿ ಬೆಲ್ ನಿಲ್ಲಿಸಿ ಸದನವನ್ನು ಪ್ರಾರಂಭಿಸಿದ್ದೀರಿ. ನಿನ್ನೆ ಮಧ್ಯಾಹ್ನದಲ್ಲೂ ಕೂಡ ಬೆಲ್ ಆದರೆ 12-13 ಜನಕ್ಕಿಂತ ಜಾಸ್ತಿ ಇರುವುದಿಲ್ಲ. ಇವತ್ತೂ ಕೂಡ ಬೆಲ್ ಹಾಕಿ ಅರ್ಧ ಗಂಟೆ ಮೇಲೆ ಆಯಿತು. ಕೋರಂ ಇರಲಿಲ್ಲ. ಕೊನೆಗೆ ತಾವು ಬಂದ ಮೇಲೆ ಸುಮಾರು 15 ಜನ ಆದರೂ ಇರ-ಬೇಕು, ಅಂದರೆ ಎಷ್ಟರ ಮಟ್ಟಿಗೆ ಈ ಸದನವನ್ನು ನಡೆಸಬೇಕೆಂಬ ಆಸಕ್ತಿ ಅವರಿಗೆ ಇದೆ, ಮತ್ತು ನಮಗೆ ಏನು ಹೇಳುತ್ತಿದ್ದಾರೆ, ಈ ಸದನದಲ್ಲಿ ಧರಣಿ ಮಾಡಿ ಕಾಲಹರಣ ಮಾಡುತ್ತಿದ್ದೇವೆ, ಎನ್ನತಕ್ಕಂತಹ

ಮಾತನ್ನು ಹೇಳತಕ್ಕಂಥದ್ದು ಮತ್ತು ಯಾವುದೂ ಸಂಬಂಧ ಇರಲಿಲ್ಲದ ವಿಷಯವನ್ನು ನೀವು ಪ್ರಸ್ತಾಪ ಮಾಡುತ್ತಿದ್ದೀರಿ ಎಂದು ಹೇಳತಕ್ಕಂಥದ್ದು ಇಂತಹ ಮಾತುಗಳನ್ನು ಹೇಳಿಕೊಂಡು ನೀವು ಈ ಸದನಕ್ಕೆ ಗೌರವ ತರುತ್ತೀರಿ ಎಂದು ಭಾವಿಸಿದ್ದರೆ ಅದು ಸರಿಯಲ್ಲ. ಅದಕ್ಕೆ ಅಧ್ಯಕ್ಷರೆ, ತಾವೇ ನಮ್ಮ ರಕ್ಷಣೆಗೆ ಬರಬೇಕು. ನಾವು ಹೇಗೆ ನಡೆದುಕೊಳ್ಳಬೇಕೆಂದು ನೀವು ಹೇಳಿಕೊಟ್ಟರೆ ನಾವು ಅದೇ ರೀತಿಯಾಗಿ ನಡೆದುಕೊಳ್ಳುತ್ತೇವೆ. ನಮ್ಮ ಗೌರವ ನಮಗೆ ಮುಖ್ಯವಾಗಿರತಕ್ಕಂಥದ್ದು. ನಮ್ಮ ಸ್ವಾಭಿಮಾನದ ರಕ್ಷಣೆ ಮಾಡತಕ್ಕಂಥದ್ದು ತಮ್ಮ ಕೈಯಲ್ಲಿದೆ. ಅದಕ್ಕೆ ದಯವಿಟ್ಟು ತಾವು ಅದರ ಬಗ್ಗೆ ಚಿಂತನೆ ಮಾಡಬೇಕು. ಮತ್ತು ಅವರಿಗೆ ಸರಿಯಾಗಿ ಪಾಠ ಹೇಳಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆ ವಿಷಯ ಪ್ರಸ್ತಾಪ ಮಾಡುತ್ತೇನೆ. ಒಬ್ಬ ಸಣ್ಣ ಅಧಿಕಾರಿಗೋಸ್ಕರ 108 ಜನ ವಿಧಾನಸಭಾ ಸದಸ್ಯರು ಧರಣಿ ಮಾಡಬೇಕಾದ ಪರಿಸ್ಥಿತಿ ಬಂದಿರತಕ್ಕಂಥದ್ದು ನಿಜವಾಗಿಯೂ ದುರಾದೃಷ್ಟಕರವಾದ ಒಂದು ವಿಷಯ. ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹೋರಾಟ ಮಾಡಬೇಕಾಗಿ ಬಂದಿರತಕ್ಕಂಥದ್ದು ಕೂಡ ಅಷ್ಟೆ. ಇದೊಂದು ನಮಗೆಲ್ಲಾರಿಗೂ ನೋವಾಗಿರತಕ್ಕಂಥ ವಿಷಯ. ಏಕೆ ಸರ್ಕಾರ ಇದರ ಬಗ್ಗೆ ಪ್ರತಿಷ್ಟೆ ಮಾಡಿಕೊಳ್ಳಬೇಕು, ಶಾಸಕರು ಇಷ್ಟು ಜನ ಹೇಳುತ್ತಿದ್ದಾರೆ, ಇಡೀ ಸದನದ ಅರ್ಧ ಭಾಗ ಜನ ಹೇಳುತ್ತಿರಬೇಕಾದರೆ ನೀವು ನಿನ್ನೆ ಐದು ನಿಮಿಷದಲ್ಲಿ ಈ ವಿಷಯ ಮುಗಿಸಬಹುದಾಗಿತ್ತು. ಒಬ್ಬ ಅಧಿಕಾರಿಗೋಸ್ಕರ ಇಡೀ ಸದನ 2-3 ಗಂಟೆಗಳ ಕಾಲ ಧರಣಿ ಕೂಡಬೇಕಾದ ಪರಿಸ್ಥಿತಿಯನ್ನು ಸರ್ಕಾರ ತಂದಿದೆ. ಆದ್ದರಿಂದ ತಕ್ಷಣ ಈಗಲಾದರೂ ಅವರು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.):- ನಮ್ಮ ಕೋಲಾರ ಜಿಲ್ಲೆಯ ಎಕ್ಸ್ಸೈಎಮ್.ಎಲ್.ಎ. ಶ್ರೀ ಭಕ್ತ ವತ್ಸಲಂ ಅವರು ಒಬ್ಬ ಪೋಲಿಸ್ ಅಧಿಕಾರಿಗೆ ಬೇತಮಂಗಲದಲ್ಲಿ ಗಲಾಟೆ ಮಾಡಿದ್ದಕ್ಕೋಸ್ಕರ ಮೂರು ತಿಂಗಳು ಬಳ್ಳಾರಿ ಜೈಲಿನಲ್ಲಿ ಹಾಕಿದ್ದರು. ಸದನದ ಒಳಗೆ ಬಂದು ಪೋಲಿಸರು ನಾನು ಏನೂ ಗಲಾಟೆ ಮಾಡಿಲ್ಲ ಸುಮ್ಮನೆ ಹೋಗಿ ಕೇಳಿದ್ದಕ್ಕೋಸ್ಕರ ನನಗೆ ಹೊಡೆದಿದ್ದಾರೆ. ಇಷ್ಟೆಲ್ಲಾ ಕೇಸ್ ಬರೆದಿದ್ದಾರೆ ಎಂದು ನಮ್ಮ ಬಳ್ಳಾರಿಯ ಶಾಸಕರು ಹೇಳಿದ್ದಾರೆ. They all joined together fingering at legislator. They have their unity and power, why not we and for us? That is my request. Therefore, kindly punish that particular officer. When it affects us, it affects everybody. The officers are thinking, ಶಾಸಕರು ಬಂದು ಇಲ್ಲಿ ಮಾತನಾಡುತ್ತಾರೆ, ನಾವೆಲ್ಲಾ ಕೆಲಸ ಮಾಡುವುದಿಲ್ಲ, ಶಾಸಕರು ಹೀಗೆ ಮಾಡುತ್ತಿದ್ದಾರೆ, ನಾವು ಏಕೆ ಕೆಲಸ ಮಾಡಬೇಕು ಎನ್ನುವುದಾದರೆ, why should we do that. Therefore, we should all be united either that side or this side. If it affects Legislators it affects all of us.

MR. SPEAKER:- That is a good sign.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಅಧ್ಯಕ್ಷರೆ, ಸದಸ್ಯರಿಗೆ ಸಮಸ್ಯೆ ಬಂದುದ್ದನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇವೆ. ನಮ್ಮ ಜಯರಾಮಶೆಟ್ಟಿಯವರ ಬಗ್ಗೆ ಈ ಸಭೆ ಪ್ರಸ್ತಾಪ ಆಯಿತು. ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ನ್ನು ಟ್ರಾನ್ಸ್‌ಫರ್ ಮಾಡಿದಿರಿ. ಆದರೆ ಈಗ ಪುನಃ ವಾಪಸ್ ಆಲ್ಲಿಗೇ ಬಂದಿದ್ದಾರೆ. ಏನು ಸಿಗ್ನಲ್ ಕಳುಹಿಸುತ್ತಾರೆ ಸರ್ಕಾರದಿಂದ - what is the signal you are sending to other officers in other constituency? ಹಾಗೆಯೇ ಶ್ರೀ ಬಿ.ಬಿ. ಶಿವಪ್ಪನವರ ಮೇಲೆ ಹಲ್ಲೆ ಆಯಿತು. ಕೇಸ್ ಅವರ ಮೇಲೆ ಹಾಕಿದರು. ಜಯರಾಮಶೆಟ್ಟಿಯವರ ವಿಚಾರದಲ್ಲಿ ತಾವು ಏನು ಹೇಳಿದಿರಿ, ತಾವು ಅಪ್ಪಣೆ ಕೊಡಿಸಿದಿರಿ; ಕೇಸನ್ನೂ ವಾಪಸ್ ತೆಗೆಸುತ್ತಾರೆ. ನಮ್ಮದು ಒಂದು ಡಿಮ್ಯಾಂಡ್ ಇತ್ತು, ಅವನನ್ನು ವರ್ಗಾವಣೆ ಮಾಡಿ ಎಂದು; ಕೇಸ್ ವಾಪಸ್ ತೆಗೆಯಲಿಲ್ಲ. ಅವನನ್ನು ಆಲ್ಲೇ ತಂದು ಹಾಕಿದರು. ಇದು ಒಬ್ಬ ಅಧಿಕಾರಿ ಪ್ರಶ್ನೆ ಅಲ್ಲ, ಒಂದು ಕಡೆ ನಾನು ಶಾಸಕನಾಗಿದ್ದಾಗ 1968ನೇ ಇಸವಿಯಲ್ಲಿ ಕೆಲವರು ಇದ್ದವರಿಗೆ ನೆನಪಿರಬಹುದು. ರಾಮಕೃಷ್ಣರವರಿಗೆ ನೆನಪಿದೆ. ನನ್ನ ಬಗ್ಗೆ ನನ್ನ ಕ್ಷೇತ್ರದ ಒಬ್ಬ ಮಂತ್ರಿ ಮಾತನಾಡಿದರು - ಅನನುಭವಸ್ಥರಿಗೆ, ಕೈಲಾಗದವರಿಗೆ ಓಟು ಕೊಟ್ಟು ಬಿಡುತ್ತೀರಿ ಎಂದು; ಇಷ್ಟೇ ಹೇಳಿದ್ದು ಅವರು, ಲಕ್ಕಪ್ಪಗೌಡರು ಎಂದು. ಅವರೆಲ್ಲಾ ದೇವರಂಥ ಜನ. ಆಗ ಪ್ರಿವಿಲೇಜ್ ಮೋಷನ್ ಹಾಕಿ, ಎರಡು ದಿವಸ ಸಭೆ ನಡೆಯಲಿಲ್ಲ. ಅವರು ಕೊನೆಗೆ ಸಭೆಯಲ್ಲಿ ಅತ್ತರು. ಮಧುಗಿರಿಯಲ್ಲಿ ಗಲಾಟೆಯಾಯಿತು. ಪೋಲಿಸರ ಅತೀರೇಖ ಆಯಿತು. ಯಾರೂ ಎಂ.ವಿ. ರಾಮರಾಯರನ್ನು ರಾಜೀನಾಮೆ ಕೇಳಲಿಲ್ಲ. ಮರ್ಯಾದಸ್ಥರು ಅವರು, ನಾನು ಇರೋದು ತಕ್ಕದ್ದಲ್ಲ, ಪೋಲೀಸ್‌ನವರು ಮಾಡಿದ ಅಪರಾಧಕ್ಕೆ ನಾನು ಹೊಣೆ ಹೊತ್ತುಕೊಳ್ಳಬೇಕೆಂದು ಅವರು ರಾಜೀನಾಮೆಯನ್ನು ಕೊಟ್ಟರು. ನಾವು ಇಲ್ಲಿ ಮಂತ್ರಿಗಳ ರಾಜೀನಾಮೆಯನ್ನೂ ಕೂಡ ಕೇಳಲಿಲ್ಲ. ಸಬ್ ಇನ್‌ಸ್ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡಿ, ಅವನು ಸುಳ್ಳು ಕೇಸ್ ಹಾಕುತ್ತಾನೆ, ಮಾಡಬಾರದ್ದನ್ನು ಮಾಡುತ್ತಿದ್ದಾನೆ, ಅವನನ್ನು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರೆ ಅವನನ್ನು ವಾಪಸ್ಸು ಆಲ್ಲೇ ತಂದು ಹಾಕುತ್ತೀರಿ; ನೀವು ಹೊಡೆಸಿಕೊಂಡವರ ಮೇಲೆ ಕೇಸ್ ಹಾಕುವಂಥ ಅಧಿಕಾರಿಗಳನ್ನು ಇಟ್ಟುಕೊಳ್ಳುತ್ತೀರಿ. ಇವೊತ್ತು ವಿರೋಧ ಪಕ್ಷದ ಸದಸ್ಯರ ಮೇಲೆ ಕೇಸ್ ಹಾಕುತ್ತಾರೆ. ನಾಳೆ ಆಳುವ ಪಕ್ಷದ ಸದಸ್ಯರ ಮೇಲೆ ಕೇಸ್ ಹಾಕುತ್ತಾರೆ, ನಾಡಿದ್ದು ಮಂತ್ರಿಗಳ ಮೇಲೆ ದೂರಿಗೆ ಬರುತ್ತಾರೆ. ಇಂಥ ವ್ಯವಸ್ಥೆಯಿಂದ ಮುಂದೆ ಇನ್ನು ಏನು ಮಾಡಬೇಕೆಂದು ಮಾಡಿದ್ದೀರಿ? But, what about the system? ನೀವು ಎಷ್ಟು ವರ್ಷ ಇರಬೇಕೋ ಅಷ್ಟು ವರ್ಷ ಇದ್ದು ಹೋಗುತ್ತೀರಿ ಆದರೆ you will be spoiling the system.

ಜನ ಪ್ರತಿನಿಧಿಗಳಿಗೆ ನಾವು ಬೇಕಾದದ್ದನ್ನು ಮಾಡುತ್ತೀವೆಂದರೆ ಸರ್ಕಾರ ತಲೆ ತಗ್ಗಿಸಬೇಕು. ಇದಕ್ಕೆ ಶಾಸಕರು ಅಷ್ಟೇ ಅಲ್ಲ, ಇದಕ್ಕೆ ಸರ್ಕಾರವೇ ತಲೆ ತಗ್ಗಿಸಬೇಕು. ಆದ್ದರಿಂದ ಇದಕ್ಕೆ ನೀವು ಒಳ್ಳೆಯ ಸಿಗ್ನಲ್ ತೋರಿಸಬೇಕು. ಎಲ್ಲಿ ಯಾವ ಯಾವ ಅಧಿಕಾರಿಗಳು ಮಿತಿಮೀರಿ ನಡೆದುಕೊಳ್ಳುತ್ತಾರೋ

ಅವರ ಬಾಲ ಕತ್ತರಿಸಿದರೆ ಉಳಿದವರಿಗೆ ಒಳ್ಳೆಯ ಸಿಗ್ನಲ್ ಹೋಗುತ್ತದೆ. ಇವೊತ್ತು ಒಬ್ಬ ಎಸ್.ಪಿ. ಶಾಸಕರ ವಿರುದ್ಧ ಹೇಳಿಕೆ ಕೊಡುತ್ತಾನೆ. ಬಿಜಾಪುರದಲ್ಲಿ ಯಾರು ಅವರಿಗೆ ಅಧಿಕಾರ ಕೊಟ್ಟವರು? ನೀವು ಸೀರಿಯಸ್ಸಾಗಿ ತೆಗೆದುಕೊಂಡು ಮನನ ಮಾಡಿಕೊಳ್ಳಬೇಕು. ನೀವು ಎದುರು ಪಾರ್ಟಿಯಲ್ಲಿ ಇದ್ದು ಹೋದವರು, ಬಹುಶಃ ಆಗ ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದರು. ಅವರಿಗೆ ಸ್ವಲ್ಪ ಒಳ್ಳೆಯ ಸಂಸ್ಕೃತಿ ಇತ್ತು. ಅವರು ಈ ರೀತಿ ಮಾಡುತ್ತಿರಲಿಲ್ಲ. ಚುನಾಯಿತ ಸರ್ಕಾರ ಎಂದರೇನು? ಅದು ಕರ್ನಾಟಕ ರಾಜ್ಯ ಸರ್ಕಾರ, ಜನತಾ ದಳಕ್ಕೆ ಓಟು ಕೊಟ್ಟು ಗೆಲ್ಲಿಸಿದ ಸರ್ಕಾರ ಅದು. ತಮ್ಮ ಪ್ರಜಾತಂತ್ರ ವ್ಯವಸ್ಥೆನಲ್ಲಿ ಇಡೀ ರಾಜ್ಯಕ್ಕೆ ಆಡಳಿತ ಮಾಡಲು ಬಂದಿರುವುದು. ಅಂದರೆ ಎಲ್ಲರಿಗೂ ಸಮಾನಾಂತರವಾಗಿ ನೋಡಿಕೊಳ್ಳಬೇಕೇ ಹೊರತು ಒಂದು ಪಕ್ಷದ ಪರವಾಗಿ ಇರುವುದಕ್ಕೆ ಅಲ್ಲ. ಈಗ ಯಾವ ಶಾಸಕರಿಗೆ ಮನ ನೊಂದಿದೆ, ಇದರಿಂದ ಅವರಿಗಷ್ಟೇ ಅವಮಾನವಲ್ಲ, ಇಡೀ ಸದನಕ್ಕೇ ಅವಮಾನ ಸರ್ಕಾರಕ್ಕೂ ಅವಮಾನ ಎಂದು ತಿಳಿದುಕೊಂಡು ಏನು ಪರಿಹಾರ ಸೂಚಿಸುತ್ತೀರಿ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಅಧ್ಯಕ್ಷರೇ, ತಮ್ಮ ಮುಂದೆ ಅನೇಕ ಸಾರಿ ಇಂಥ ಮನವಿಗಳು ಬಂದಿವೆ. ಮಾನ್ಯ ಅಧ್ಯಕ್ಷರೇ, ಈ ಸದನದಲ್ಲೂ ಬಂದಿದೆ, ಮತ್ತು ತಮ್ಮ ಕಾರ್ಯಾಲಯದಲ್ಲೂ ಬಂದಿದೆ. ಈ ಬಗ್ಗೆ ತಾವು ಕೂಡ ಅನೇಕ ಸಾರಿ ಮನ ನೊಂದಿದ್ದೀರಿ. ತಾವು ಹಿಂದೆ ಅನುಭವಿಸಿದ್ದೀರಿ. ತಮ್ಮ ಅನುಭವದಲ್ಲಿ ತಮಗೆ ಗೊತ್ತಾಗಿದೆ. ಪ್ರಜಾಪ್ರಭುತ್ವದಲ್ಲಿ ಶಾಸನ, ಶಾಸಕರಿಗೆ ಸಂಪೂರ್ಣವಾಗಿ ರಕ್ಷಣೆ ಕೊಡಬೇಕಾದುದು ತಮ್ಮ ಹೊಣೆ. ಇತ್ತೀಚಿನ ದಿನಗಳಲ್ಲಿ ಶಾಸಕರು ಎಂದು ಹೇಳಿದರೆ ಒಬ್ಬ ಅತ್ಯಂತ ಕಡೆಗಾಣಿಸಿರತಕ್ಕಂಥ ವ್ಯಕ್ತಿ ಎನ್ನುವ ರೀತಿಯಲ್ಲಿ ಇವೊತ್ತು ಅಧಿಕಾರಿ ವರ್ಗ ಕಾಣುತ್ತಿದೆ. ಒಬ್ಬ ಶಾಸಕ ತನ್ನ ಕ್ಷೇತ್ರದಲ್ಲಿ ಯಾವುದೇ ಒಂದು ಭಯ, ಭೀತಿ ಇಲ್ಲದೇ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ವಾತಾವರಣ ಇಂದು ನಿರ್ಮಾಣ ಆಗಿಲ್ಲ. ಇಡೀ ಕ್ಷೇತ್ರದಲ್ಲಿ ಒಂದು ರೀತಿಯ ಭಯ ಉತ್ಪಾದನೆಯಾಗಿದೆ. ಇವೊತ್ತು ಪೋಲೀಸ್ ಅಧಿಕಾರಿಗಳು, ಜಿಲ್ಲಾಪಂಚಾಯತ್ ಅಧಿಕಾರಿಗಳು, ಮತ್ತು ತಹಸೀಲ್ದಾರರು ಈ ಮೂರು ಜನ ಬಹಳ ಪ್ರಮುಖವಾಗಿರತಕ್ಕಂಥವರು. ಈ ಮೂರು ಜನರ ಅಂಗ ಶಾಸಕರ ಜೊತೆಯಲ್ಲಿರಬೇಕು. ಅವರೇನೂ ವೈಯಕ್ತಿಕವಾಗಿ ಶಾಸಕರಿಗೆ ಮಾಡುವುದು ಬೇಡ. ದಿನನಿತ್ಯ ಶಾಸಕರು ಜನಸಾಮಾನ್ಯರ ಕೆಲಸಗಳನ್ನು ಮಾಡುವಾಗ ಅಧಿಕಾರಿಗಳು ಶಾಸಕರ ಜೊತೆಯಲ್ಲಿ ಸಹಕಾರ ಮಾಡಲಿಲ್ಲ ಎಂದರೆ ಅಲ್ಲಿ ಅವರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ನಂಜೇಗೌಡರು ಒಂದು ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಕಾಂಗ್ರೆಸ್ ಸರ್ಕಾರದಲ್ಲಿ ಒಂದು ಸಂಸ್ಕೃತಿ ಇತ್ತು ಎಂದು ಹೇಳಿದರು. ಪ್ರಾಮಾಣಿಕವಾಗಿ ನಾನು ಅದನ್ನು ಒಪ್ಪುತ್ತೇನೆ. ಮುಕ್ತ ಕಂಠದಿಂದ ನಾನು ಹೇಳುತ್ತೇನೆ. ಇಂಥ ವಾತಾವರಣ ಕಾಂಗ್ರೆಸ್ ಸರ್ಕಾರದಲ್ಲಿ, ಯಾವುದೇ ಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ ಇದ್ದಾಗ ಇರಲಿಲ್ಲ. ನಾನು ಶ್ರೀ ವೀರೇಂದ್ರ ಪಾಟೀಲರನ್ನು ನೋಡಿದ್ದೇನೆ, ನಂತರ

ಬಂಗಾರಪ್ಪನವರನ್ನು ನೋಡಿದ್ದೇನೆ, ನಂತರ ವೀರಪ್ಪ ಮೊಯಿಲಿಯವರನ್ನು ನೋಡಿದ್ದೇನೆ, ಅವರು ಮಾತು, ಅವರ ಸೌಜನ್ಯತೆ ನೋಡಿ ನಿಜವಾಗಲೂ ನನಗೆ ಸಂತೋಷವಾಗಿದೆ. ತಮಗೆ ಗೊತ್ತಿದೆ, ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ 1967ರಿಂದ ಇದ್ದೇವೆ. 1967ರಿಂದ ಇಂಥ ಪರಿಸ್ಥಿತಿ, ಇಂಥ ವ್ಯವಸ್ಥೆ ಇರಲಿಲ್ಲ. ಇವೊತ್ತು ಇದ್ದಂಥ ಶಕ್ತಿಯುತವಾದ ಹೋರಾಟದಲ್ಲಿ ಅಧಿಕಾರಿಗಳು ಈ ಮಟ್ಟದಲ್ಲಿ ಇರಲಿಲ್ಲ. ಶ್ರೀ ವೀರೇಂದ್ರ ಪಾಟೀಲರು ಹಿಂದೆ 1967ರಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಸರ್ಕಾರಿ ಆದೇಶವನ್ನು ಹೊರಡಿಸಿದ್ದಾರೆ. ಅವರು ಐ.ಎ.ಎಸ್. ಅಧಿಕಾರಿಯಾಗರಲೀ, ಯಾವುದೇ ಉನ್ನತ ಮಟ್ಟದ ಮಟ್ಟದ ಅಧಿಕಾರಿಯಾಗಿರಲಿ ಶಾಸಕರು ಬಂದಾಗ ಅವರು ಕುರ್ಚಿಯಿಂದ ಎದ್ದು ನಿಲ್ಲಬೇಕು. ನಂತರ ಅವರನ್ನು ಕರೆದು ಕೂರಿಸಿ ಅವರ ಸಮಸ್ಯೆಯನ್ನು ಕೇಳಬೇಕು. ನಮ್ಮ ರಾಜ್ಯದ ಸಮಸ್ಯೆಯಾಗಲೀ, ನಮ್ಮ ಕ್ಷೇತ್ರದ ಸಮಸ್ಯೆಯಾಗಲೀ ಅವರು ಹೇಳುವುದನ್ನು ಕೇಳಬೇಕು. ಕಾನೂನು ವಿರುದ್ಧವಾದ ಕೆಲಸವನ್ನು ಯಾರೂ ಶಾಸಕರು ಹೇಳುವುದಿಲ್ಲ. ಒಟ್ಟಾರೆ ಮೊದಲು ಅವರನ್ನು ಸ್ವಾಗತಿಸಬೇಕೆಂದು ಆದೇಶ ಇದೆ. ಆದರೆ ಇವೊತ್ತು ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆ ಎಂದರೆ ಶಾಸಕರನ್ನು ನೀನು ಶಾಸನಸಭೆಯಲ್ಲಿ ನನ್ನ ವಿಚಾರವನ್ನು ಪ್ರಸ್ತಾಪ ಮಾಡಿದರೆ ಶಾಸಕರ ಭವನದಲ್ಲೇ ನಿನ್ನನ್ನು ಮುಗಿಸುತ್ತೇನೆ, ಎನ್ನುವ ಆ ಪದ ಏನು ಇದೆ ಅದು ಬಹಳ ಅತ್ಯಂತ ಕಠೋರವಾದುದು, ಮತ್ತು ಇದನ್ನು ಯಾರೂ ಸಹಿಸುವುದಕ್ಕಾಗುವುದಿಲ್ಲ. ಇದನ್ನು ನಾವು ಪಕ್ಷರಹಿತವಾಗಿ ಖಂಡನೆ ಮಾಡಬೇಕಾಗಿದೆ. ಈ ಸಭೆಯಲ್ಲಿ ನಾವು ಯಾವುದೇ ಭಯ ಭೀತಿ ಇಲ್ಲದೇ ಇಲ್ಲಿ ಭಾಗವಹಿಸಬೇಕು. ಯಾವುದಾದರೊಂದು ಭಯ ಭೀತಿ ಬಂದರೆ ಅದು ಈ ಸದನಕ್ಕೆ ಗೌರವ ತರತಕ್ಕಂಥದ್ದಲ್ಲ. ಆದಕ್ಕಾಗಿ ಸರ್ಕಾರ ಒಂದು ಸ್ಪಷ್ಟವಾಗಿರತಕ್ಕಂಥ ನಿಲುವನ್ನು ಕೊಡಬೇಕು. ಈ ಬಗ್ಗೆ ಸರ್ಕಾರ ಒಂದು ಆದೇಶ ಹೊರಡಿಸಬೇಕು. ಶಾಸಕರ ಜೊತೆಯಲ್ಲಿ ಅಧಿಕಾರಿಗಳು ಯಾವ ಯಾವ ರೀತಿ ಇರಬೇಕೆಂದು. ತಾವು ತೋರಿಸುತ್ತಿರುವ ಈ ನಿಯಮದ ಪುಸ್ತಕ ಒಂದು ಭಗವದ್ಗೀತೆ ಇದ್ದ ಹಾಗೆ. ಅದಕ್ಕೆ ನಾವು ಖುರಾನ್, ಬೈಬಲ್ ಎಂದೂ ಕೂಡ ಹೇಳಬಹುದು. ನಾನು ಆ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈವೊತ್ತು ಅದಕ್ಕೆ ತಕ್ಕಂತೆ ಇಲ್ಲಿ ನಡೆಯುತ್ತಿಲ್ಲ. ಇವೊತ್ತು ಶಾಸಕರಿಗೆ ಇರತಕ್ಕಂಥ ಎಲ್ಲಾ ಅಧಿಕಾರವನ್ನು ಕಳೆದಿದ್ದಾರೆ. ಆದಕಾರಣ ಈ ಸಂದರ್ಭದಲ್ಲಿ ಇದಕ್ಕೆ ಕಾರಣರಾದಂಥ ಅಧಿಕಾರಿ ಯಾರು ಇದ್ದಾರೆ ಅವರಿಗೆ ಶಿಕ್ಷೆಯಾಗಬೇಕು. ಇನ್ನು ಮುಂದೆ ಶಾಸಕರ ಬಗ್ಗೆ ಯಾವ ರೀತಿ ಯೋಜನೆ ಎನ್ನತಕ್ಕಂಥದ್ದು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರತಕ್ಕಂಥ ವ್ಯಕ್ತಿ, ಇಂಥದ್ದರ ಬಗ್ಗೆ ಹೋರಾಟ ಮಾಡಿರತಕ್ಕಂಥ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಇಂತಹ ವ್ಯವಸ್ಥೆ ನಡೆಯಬಾರದು. ನಾನು ತಮ್ಮ ಮೂಲಕ ಅವರನ್ನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಸಂದರ್ಭದಲ್ಲಿ ಅವರು ಒಂದು ಸ್ಪಷ್ಟವಾದ ನಿರ್ಧಾರಕ್ಕೆ ಬರಬೇಕೆಂದು ಹೇಳಿ ನಾವು ಸಂಪೂರ್ಣವಾಗಿ ಧರಣಕ್ಕೆ ಬೆಂಬಲ ಕೊಡುತ್ತಿದ್ದೇವೆ. ತಾವು ನಮ್ಮ ರಕ್ಷಣೆ ಮಾಡುವುದು ತಮ್ಮ ಕರ್ತವ್ಯ ಎಂದು ಹೇಳುತ್ತೇನೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಅಧ್ಯಕ್ಷರೇ ಐದು ದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು ಕಛೇರಿ ಅಧಿಕಾರಿಗಳು ಫ್ರೆನ್ ಡಾನ್ ಸ್ಟ್ರೈಕ್ ಮಾಡಿದ್ದರು. ಅದರ ಬಗ್ಗೆ ಸರ್ಕಾರ

ಏನು ಕ್ರಮ ಕೈಗೊಂಡಿದೆ? ಎ.ಸಿ. ಯವರು ಈಗ ಬರುತ್ತಾರೆಂದು ನಮ್ಮನ್ನು ಕೂರಿಸಿ ನಾವೇ ಕರೆಸಿ-ಬಿಟ್ಟಿದ್ದೇವೆಂದು ನಮ್ಮ ಮೇಲೆ ಕ್ರಮಿನಲ್ ಕೇಸ್ ಹಾಕುತ್ತಾರೆಂದರೆ ಏನು ಅರ್ಥ? ಇಲ್ಲಿ ಸದನದಲ್ಲಿ ವಿಚಾರಣಾಧಿಕಾರಿ ಡಿ.ಪಿ.ಸಿ. ಯವರಿಂದ ತನಿಖೆ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಮಾಡಿದ್ದೀರೊ? ಲೋಕಸಭೆ ಚುನಾವಣೆ ನಡೆಯುವಾಗ ನಮ್ಮ ಮೇಲೇನೇ ಕೇಸ್ ಪುಟ್ ಆಪ್ ಮಾಡಿದರು. ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇವ್ರೊತ್ತು ಶಾಸಕರ ಕೊಲೆ ಮಾಡುತ್ತೇನೆಂದರೆ ನಿಮ್ಮ ಆಡಳಿತಕ್ಕೆ ಒಂದು ದೊಡ್ಡ ಕಳಂಕವನ್ನು ತರುತ್ತಿದ್ದಾರೆ. ನಿನ್ನೆಯಿಂದ ಇವ್ರೊತ್ತಿನವರೆಗೆ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಶಿಕ್ಷೆ ಕೊಡಬೇಕೆಂದು ನಾವು ಧರಣಿ ಹೂಡಬೇಕೇ? ಹಾಗಾದರೆ ನಮಗೆ ಒಂದಿಷ್ಟು ಆತ್ಮಾಭಿಮಾನ ಹಾಗೂ ಸ್ವಾಭಿಮಾನ ಇಲ್ಲವೇ? ನಾಳೆ ಅವರು ಈ ಕಡೆಗೆ ಬಂದಾಗ ಏನಾಗಾದರೆ ಆಡಳಿತ ಪಕ್ಷದವರು ಏನು ತೀರ್ಮಾನ ಕೈಗೊಳ್ಳಬೇಕು? ಇದೇ ಪರಿಸ್ಥಿತಿ...

ಅಧ್ಯಕ್ಷರು:- ಆಯಿತು. ಎಕ್ಸೈಟ್‌ಮೆಂಟಾ ಆಗಿ... Alright don't get excited; it is a very unpleasant thing.

ಶ್ರೀ ಯು.ಆರ್. ಸಭಾಪತಿ:- ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು; ಅಷ್ಟು ಸುಲಭವಾಗಿ ತೆಗೆದುಕೊಳ್ಳಬಾರದೆಂದು ಹೇಳಿ ನಾವು ಧರಣಿಗೆ ಬೆಂಬಲ ಕೊಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಗೌರವಕ್ಕೆ ಚ್ಯುತಿ ತರುವ ಹಾಗೆ ಯಾವುದಾದರೂ ಅಧಿಕಾರಿ ನಡೆದುಕೊಂಡಿದ್ದರೆ ವಿಚಾರಣೆ ಮಾಡಿ ಅವರಿಗೆ ಶಿಕ್ಷೆ ಮಾಡುತ್ತೇವೆ. ಏಕೆಂದರೆ ವಿಚಾರಣೆ ಮಾಡದೆ ಯಾರನ್ನೂ ಶಿಕ್ಷೆ ಮಾಡುವುದಕ್ಕಾಗುವುದಿಲ್ಲ. ನಾನು ವಿಚಾರಣೆ ಮಾಡಿ, ಅದು ಏನು ಇದೆ ಎಂದು ಸದನಕ್ಕೆ ತಿಳಿಸಿ ತಕ್ಕ ಶಿಕ್ಷೆಯನ್ನು ಕೊಡುತ್ತೇವೆ. ಏಕೆಂದರೆ ಕೆಲವು ಅಧಿಕಾರಿಗಳು ಈ ತರಹ ಒಂದು ಇನ್‌ಡಿಫರೆಂಟ್ ಆಗಿರುವುದು ಕಂಡು ಬಂದಿದೆ. ಅದನ್ನು ಸರಿಪಡಿಸಬೇಕಾಗಿದೆ. ಅದನ್ನು ವೇರಿಫೈ ಮಾಡಿ ಶಿಕ್ಷೆ ಮಾಡಬೇಕು. ಆದಕಾರಣ ಮಾನ್ಯ ಸದಸ್ಯರು ಸಹಕರಿಸಬೇಕು. ತಾವು ಏನು ಹೇಳಿದ್ದೀರಿ ಅದನ್ನು ಗೃಹ ಇಲಾಖೆಗೆ ತಿಳಿಸಿ ವರದಿಯನ್ನು ತರಿಸಿ ತಪ್ಪಿತಸ್ಥ ನೌಕರರು ಯಾವುದೇ ತಪ್ಪು ಮಾಡಿದ್ದರೆ ಅವನಿಗೆ ಶಿಕ್ಷೆ ಮಾಡುತ್ತೇವೆ.

10.50 ಎ.ಎಂ

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೇ, ಈಗ ಒಂದು ಲಿಸ್ಟ್ ಮಾಡೋಣ ಯಾವ್ಯಾವ ಶಾಸಕರಿಗೆ ಏನೇನು ಅವಮಾನ ಆಗಿದೆ ಎನ್ನುವ ಬಗ್ಗೆ ಒಂದು ಲಿಸ್ಟ್ ಮಾಡೋಣ. ಏಕೆಂದರೆ ಸರ್ಕಾರ ಹೇಳಿದ್ದನ್ನೇ ಹೇಳುತ್ತದೆ. ಇದೇನೂ ಮೊದಲನೆಯ ಬಾರಿಯಲ್ಲ ಪ್ರಸ್ತಾಪ ಆಗುತ್ತಿರುವುದು. ಅದಕ್ಕೆ ಸದನ ಸಮಿತಿಯನ್ನೇ ರಚಿಸಿ ಏನಾದರೂ ವ್ಯವಸ್ಥೆ ಮಾಡಬೇಕಾದ ಪರಿಸ್ಥಿತಿ ಇದೆ. ಈಗಾಗಲೇ ಮಾನ್ಯ ಸದಸ್ಯರಾದ ಜಯರಾಮಶೆಟ್ಟರ ವಿಷಯದಲ್ಲಿ ವಿಚಾರಣೆ ಆಗಿ ಪುನಃ ಆ ಸಬ್ ಇನ್ಸ್‌ಪೆಕ್ಟರನ್ನು ಮೊದಲಿದ್ದ ಸ್ಥಳಕ್ಕೇ ಹಾಕಿದ್ದಾರೆ. ಕಡೇ ಪಕ್ಷ ಆತನಿಗೆ ಟ್ರಾನ್ಸ್‌ಫರ್ ಕೂಡ ಮಾಡದೇ ವಾಪಸ್ಸು ಅಲ್ಲೇ ಹಾಕಿ ನೀವು ಒಬ್ಬ ಆಫೀಸರ್‌ನ್ನು ಕಳುಹಿಸುತ್ತೇವೆ ಎಂದರೆ ನಮಗೆ

ನಂಬಿಕೆ ಬರುವುದಾದರೂ ಹೇಗೆ? ಆದುದರಿಂದ ಈ ವಿಷಯವು ಸದನ ಸಮಿತಿಗೆ ಹೋಗಲಿ, ಅಲ್ಲಿ ವಿಚಾರಣೆ ಮಾಡಲಿ. ಆದರೆ ಅಧಿಕಾರಿಗಳ ಮಟ್ಟದಲ್ಲಿ ಎನ್‌ಕ್ವೈರಿ ಬಗ್ಗೆ ಈಗ ನಂಬಿಕೆ ಹೊರಟು-ಹೋಗಿದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ತಾವು ಹಿಂದೆ ಸರ್ಕಾರವನ್ನು ನಡೆಸಿದ್ದೀರಿ. ಸದನ ಸಮತಿಯನ್ನು ಒಬ್ಬ ಸಾಮಾನ್ಯ ಅಧಿಕಾರಿಯು ಮಿಸ್-ಬಿಹೇವಿಯರ್ ಮಾಡಿದ ಕಾರಣ ಅದರ ವಿಚಾರಣೆಗಾಗಿ ಮಾಡಬೇಕು ಎನ್ನುವುದೇ ನಂಜೇಗೌಡರ ಅಭಿಪ್ರಾಯವಾದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ:- ಇದೊಂದೇ ಕೇಸ್ ಆಗಿದ್ದರೆ ನಾನು ಹೇಳುತ್ತಿರಲಿಲ್ಲ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಬಹಳ ಅತ್ಯಂತ ಗಂಭೀರವಾದ ಪ್ರಶ್ನೆಯನ್ನು ವಿರೋಧ ಪಕ್ಷದ ನಾಯಕರು ಎತ್ತಿದ್ದಾರೆ. ನಿನ್ನೆ ರಾತ್ರಿಯೇ ಜಿಲ್ಲಾ ಪಂಚಾಯತಿ ಚೀಫ್ ಸೆಕ್ರೆಟರಿಯವರಿಗೆ ಸೂಚನೆ ಕೊಟ್ಟು ತಕ್ಷಣ ವಿಚಾರಣೆ ಮಾಡಿ ವರದಿಯನ್ನು ಕೊಡಬೇಕೆಂದು ಹೇಳಿದ್ದೇನೆ. ಆ ವರದಿಯನ್ನು ತರಿಸಿಕೊಂಡು ಪರಿಶೀಲನೆ ಮಾಡಿದ ಮೇಲೆ ಮಾನ್ಯ ಸದಸ್ಯರು ಹೇಳಿರತಕ್ಕಂಥ ಆತನ ಮೇಲಿನ ಆರೋಪ ನಿಜ ಎಂದಾದ ತಕ್ಷಣವೇ ಆತನನ್ನು ಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವನ ಮೇಲೆ ಕಾನೂನು ರೀತಿಯಲ್ಲಿ ತೆಗೆದುಕೊಳ್ಳಬೇಕಾದ ಕ್ರಮ-ವನ್ನು ಈ ಸರ್ಕಾರ ಮಾಡೇ ಮಾಡುತ್ತದೆ. ಯಾರೇ ಸದಸ್ಯರಿಗೇ ಆಗಲೀ ಅವರು ವಿರೋಧ ಪಕ್ಷ-ದಲ್ಲಿರಬಹುದು, ಆಡಳಿತ ಪಕ್ಷದಲ್ಲಿರಬಹುದು.

ಶ್ರೀ ಹೆಚ್.ಎನ್. ನಂಜೇಗೌಡ:- ಇದಕ್ಕೆ ರಿಪೋರ್ಟ್ ಏಕೆ ಬೇಕು?

ಶ್ರೀ ಸಿದ್ಧರಾಮಯ್ಯ:- ಈಗಾಗಲೇ ವಿಚಾರಣೆ ಪ್ರಾರಂಭವಾಗಿದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಈಗ ಬಿ.ಬಿ. ಶಿವಪ್ಪನವರ ಬಗ್ಗೆ ನಾನು ಮನ ನೊಂದು ಹೇಳಬೇಕಾಗಿದೆ. ಸದಸ್ಯತ್ವಕ್ಕೆ ರಾಜೀನಾಮೆಯನ್ನು ಬರೆದಿದ್ದರು. ನಾವೆಲ್ಲ ಅದಕ್ಕೆ ವಿರೋಧ ಮಾಡಿ-ದೆವು. ಪತ್ರಿಕೆಯವರು ಬೇರೆ ವ್ಯಾಖ್ಯಾನವನ್ನೇ ಬರೆದಿದ್ದಾರೆ ಅದರ ಮೇಲೆ. ಆ ಪ್ರಶ್ನೆ ಬೇರೆ. ಹೊಡೆಸಿ-ಕೊಂಡವರು ಅವರು, ಅವರ ಮೇಲೆ ಕೇಸ್ ಹಾಕಿಸ್ತೇವೆ, ಅದಕ್ಕೂ ಇನ್ನೂ ರಿಪೋರ್ಟ್‌ಬೇಕು ಎಂದು ಕುಳಿತುಕೊಂಡರೆ ಹೇಗೆ?

ಶ್ರೀ ಸಿದ್ಧರಾಮಯ್ಯ:- ಈಗ ಮಾನ್ಯ ಸದಸ್ಯರು ಅಲಿಗೇಷನ್ ಮಾಡಿದ್ದಾರೆ. ಅಲಿಗೇಷನ್ ಮಾಡಿದ ತಕ್ಷಣ ಸರ್ಕಾರ ಕಾರ್ಯೋನ್ಮುಖವಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಕ್ಕಾಗಿ ಒಂದು ಹತ್ತು ನಿಮಿಷ ತಾವು ಸದನವನ್ನು ಮುಂದೂಡಿ ತಮ್ಮ ಕೊಠಡಿ-ಯಲ್ಲಿ ಮಾತನಾಡಿದರೆ ಒಳ್ಳೆಯದು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ಇಲ್ಲಿ ಅಧಿಕಾರಿ ಮಂಜುನಾಥ್ ಸಿ. ಕುನ್ನೂರ್‌ರವರ ಎದುರಿಗೆ ಹೇಳಿಲ್ಲ, ಆತ ಇನ್ನೊಬ್ಬರ ಹತ್ತಿರ ಹೇಳಿರತಕ್ಕಂಥದ್ದು ಮತ್ತು ಮಾತನಾಡಿದ ತಕ್ಕಂಥದ್ದು ಈ ರೀತಿಯ ಮಾತುಗಳನ್ನು ಆಡುವ ಮೂಲಕ. ಆದ್ದರಿಂದ ಇದರ ಬಗ್ಗೆ ವಿಚಾರಣೆಯನ್ನೇ ಮಾಡದೇ ಈ ಸದನದಲ್ಲೇ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು ಎನ್ನತಕ್ಕಂಥದ್ದು ಸರಿಯಾದ ಕ್ರಮ ಅಲ್ಲ. ಈ ಹಿಂದೆ ಒಂದು ಬಾರಿ ಮಾನ್ಯ ಸದಸ್ಯರಾದ ಎಲ್.ಆರ್. ಶಿವರಾಮೇಗೌಡರು ಒಬ್ಬ ಎ.ಇ.ಓ. ಮೇಲೆ ದೂರಿತ್ತು ಆತ ಕಛೇರಿಗೆ ಕುಡಿದು ಬರುತ್ತಾನೆಂದು ತಿಳಿಸಿ ಅದರ ಬಗ್ಗೆ ದೊಡ್ಡ ಚರ್ಚೆಯಾಗಿದ್ದು ಆ ಸಂದರ್ಭದಲ್ಲಿ ಮಾನ್ಯ ಖರ್ಗೆಯವರೂ ಇದ್ದರು. ಆ ಅಧಿಕಾರಿಯ ಬಗ್ಗೆ ಸುಳ್ಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆಂದಾಗಲೀ ಅಥವಾ ಬೇಕು ಬೇಕೆಂತಲೇ ಅಧಿಕಾರಿಯ ಬಗ್ಗೆ ಹೇಳಿದ್ದಾರೆಂದಾದಲೀ ನಾನು ಹೇಳುತ್ತಿಲ್ಲ. ಮಾನ್ಯ ಸದಸ್ಯರು ಈಗ ಏನು ಹೇಳಿದ್ದಾರೆ ಅದನ್ನು ನಿಜ ಎಂದು ಸರ್ಕಾರ ನಂಬಿ-ಕೊಳ್ಳುತ್ತಾ ಕೊನೆಗೆ ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡು ಸಿ.ಇ.ಓ., ಚೀಫ್ ಸೆಕ್ರೆಟರೀ ಆಫ್ ದಿ ಜಿಲ್ಲಾ ಪಂಚಾಯತ್, ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ರವರನ್ನು ಕಳುಹಿಸಿ ಆ ಅಧಿಕಾರಿ ಯಾರ ಎದುರಿಗೆ ಹೇಳಿದ್ದಾರೋ ಅವರನ್ನು ವಿಚಾರಣೆ ಮಾಡಿ ಕೂಡಲೇ ಇವ್ನೊತ್ತು ಅಥವಾ ನಾಳೆ ಒಳಗೆ ವರದಿಯನ್ನು ಕೊಡಬೇಕು ಎಂದು ಹೇಳಿದ್ದೇವೆ. ಆ ವರದಿ ಬಂದ ತಕ್ಷಣ ಏನು ಕಠಿಣವಾದ ಕ್ರಮ-ವನ್ನು ಆತನ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಇಷ್ಟು ಸ್ಪಷ್ಟವಾಗಿ ಹೇಳುವಾಗ, ಇಲ್ಲ ಸರ್ಕಾರ ಬಹಳ . . .

ಶ್ರೀ ಯು.ಆರ್. ಸಭಾಪತಿ:- ಶಾಸಕರು ಸದನದಲ್ಲಿ ಹೇಳಿರುವ ಬಗ್ಗೆ ನಿಮಗೆ ನಂಬಿಕೆ ಇಲ್ಲವೇ? ನಾನು ಸದನದಲ್ಲಿ ಹೇಳಿದ ಮಾತಿಗೆ ನಿಮಗೆ ನಂಬಿಕೆ ಇಲ್ಲವೇ? ನೀವು ಎನ್‌ಕ್ವೈರಿ ಮಾಡಿಯೇ ನೋಡಬೇಕೇ? ಶಾಸಕರು ಹೇಳಿರುವುದು ಸುಳ್ಳೋ, ಸತ್ಯವೋ? ಅದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ:- ಯಾರೋ ಕಂಟ್ರಾಕ್ಟರ್ ಮುಂದೆ ಮಾತನಾಡಿರುವುದು. ಆದ್ದರಿಂದ ನೀವು ಹಿರಿಯರಿದ್ದೀರಿ, ಅನುಭವ ಇರತಕ್ಕಂಥ ಹಲವಾರು ಸದಸ್ಯರೂ ಇದ್ದಾರೆ. ಈ ಬಗ್ಗೆ ವಿಚಾರಣೆ ಮಾಡದೆ ಹೇಗೆ ತೀರ್ಮಾನ ಕೈಗೆದುಕೊಳ್ಳುವುದು?

ಶ್ರೀ ಯು.ಆರ್. ಸಭಾಪತಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳೇ, ನಿಮಗೆ ಒಬ್ಬ ಶಾಸಕ ಸದನದಲ್ಲಿ ಹೇಳಿದ್ದರ ಮೇಲೆ ನಿಮಗೆ ನಂಬಿಕೆ ಇಲ್ಲ ಎಂದು ಹೇಳಿದ ರೀತಿ ಆಗುತ್ತದೆ. ಅದನ್ನು ನೀವು ಈ ರೀತಿಯಲ್ಲಿ ಹೇಳುತ್ತಿದ್ದೀರಿ. ಎನ್‌ಕ್ವೈರಿ ಮಾಡಿ ನೋಡುತ್ತೇವೆ ಎಂದರೆ ಶಾಸಕರು ಹೇಳಿದ್ದು ಸುಳ್ಳೇ?

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಅಧ್ಯಕ್ಷರೇ, ನೀವು ಅಧಿಕಾರಿಗಳನ್ನು ರಿಪೋರ್ಟ್ ಕೇಳುತ್ತೀರಿ. ಇಲ್ಲಿ ಏನಾಗುತ್ತದೆಂದರೆ ಮೇಲಿನ ಅಧಿಕಾರಿಗಳು ಮತ್ತು ಕೆಳಗಿನ ಅಧಿಕಾರಿಗಳು ಒಂದು ರೀತಿಯಲ್ಲಿ ತಾಯಿ ಮತ್ತು ಮಗ ಇದ್ದ ಹಾಗೆ. ನಮ್ಮ ಹಳ್ಳಿ ಕಡೆ ಒಂದು ಗಾದೆ ಹೇಳುತ್ತಾರೆ, ಏನೆಂದರೆ "ಕಳ್ಳರ ತಾಯಿ ಕಣಿ ಕೇಳಿದರೆ ಹೆಳ್ಳಗುಂಟ ದಾರಿ ತೋರಿಸಿದರು" ಎನ್ನುವ ರೀತಿ ಮಗನನ್ನು ಬಿಟ್ಟು

ಕೊಡುತ್ತಾಳೆಯೇ ತಾಯಿ? ಕದ್ದುಕೊಂಡು ಬಂದ ಮಗ ಮನೆಯಲ್ಲಿದ್ದರೂ ಎಲ್ಲೋ ಬೇರೆ ಕಡೆ ಹೋದ ಎಂದು ಹೇಳುತ್ತಾಳೆ. ಮಗ ಕಳ್ಳ ಎಂದು ಹೇಳಿಕೊಳ್ಳುವುದಿಲ್ಲ. ನಮ್ಮ ಜಯರಾಮಶೆಟ್ಟರ ವಿಚಾರವನ್ನೇ ತೆಗೆದುಕೊಂಡರೆ ಆ ಸಬ್ ಇನ್ಸಪೆಕ್ಟರ್‌ನ್ನು ತೆಗೆದುಹಾಕಿದವನನ್ನು ನೀವು ಅಲ್ಲೇ ಹಾಕಿ ನೀವು ಏನು ಎನ್‌ಕ್ವೈರಿ ಮಾಡುತ್ತೀರಿ? ಶಾಸಕರ ಮೇಲೆ ನಾನ್–ಬೇಲಬಲ್ ವಾರೆಂಟ್! ಶಾಸಕರ ಹಕ್ಕು ಭಾದ್ಯತೆ ರಕ್ಷಣೆ ಮಾಡತಕ್ಕಂಥ ವಿಚಾರದಲ್ಲಿ ಸರ್ಕಾರ ಅಪರಾಧಿ ಸ್ಥಾನದಲ್ಲಿದೆ. ಸದನ ಸಮಿತಿ ಮಾಡಿ. ನಮ್ಮ ಬಸವರಾಜ್ ಘಟನೆ ಹೋದ ತಿಂಗಳು 2ನೇ ತಾರೀಖು ನಡೆಯಿತು. ಇದರ ಬಗ್ಗೆ ಅವರು ಧರಣಿಯನ್ನೂ ಮಾಡಿ ಬಾವಿಯಲ್ಲಿ ಕುಳಿತಿದ್ದರು. ಇಲ್ಲಿ ಮೇಲಧಿಕಾರಿ ಹೇಳುತ್ತಾರಂತೆ, ಎಂ.ಎಲ್.ಎ. ಕರೆದರೆ ಬಿ.ಡಿ.ಓ. ಹೋಗಬೇಕಾಗಿಲ್ಲ ಎಂದು ಹೇಳುತ್ತಾನೆ. ನಾಳೆ ದಿವಸ ಚೀಫ್ ಸೆಕ್ರೆಟರಿಯವರನ್ನು ಚೀಫ್ ಮಿನಿಸ್ಟರ್ ಕರೆದರೆ ನಾನು ಹೋಗುವುದಿಲ್ಲ ಕಾನೂನಿನಲ್ಲಿ ಹೋಗ-ಬೇಕೆಂದೇನೂ ಇಲ್ಲ ಎಂದು ಹೇಳುತ್ತಾನೆ. ಇದು ತಾನೇ ನಿಮ್ಮ ಅಧಿಕಾರಿಗಳ ಮನೋಧರ್ಮ.

ಶ್ರೀ ವಾಟಾಳ್ ನಾಗರಾಜ್:- ಅಧಿಕಾರಿಗಳು ಎಂ.ಎಲ್.ಎ.ರವರಿಗೆ ಅಗೌರವ ಕೊಡುತ್ತಿರುವ ಬಗ್ಗೆ ಹಲವಾರು ಉದಾಹರಣೆಗಳು ಇವೆ. ಈ ಸದನದಲ್ಲಿ ಅವುಗಳನ್ನೆಲ್ಲಾ ಹೇಳಿದರೆ ನಾಳೆ ಜನರು ಪತ್ರಿಕೆಯಲ್ಲಿ ಓದಿ ಏನಪ್ಪಾ ಈ ಎಂ.ಎಲ್.ಎ.ಗಳ ಹಣೆಬರಹ ಹೀಗಾಯಿತಲ್ಲಾ ಎಂದು ರಸ್ತೆ ರಸ್ತೆಯಲ್ಲಿ ಮಾತನಾಡಿಕೊಳ್ಳುತ್ತಾರಲ್ಲಾ ಎನ್ನುವ ದೃಷ್ಟಿಯಿಂದ ಇಲ್ಲಿ ಹೇಳುವುದಕ್ಕೆ ಆಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ನಾವು ಏಕೆ ಇಲ್ಲಿ ಈ ವಿಷಯವನ್ನು ಗಂಭೀರವಾಗಿ ಪ್ರಸ್ತಾಪ ಮಾಡುತ್ತಿದ್ದೇವೆಂದರೆ, ನಾವು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಬಂದಿದೆ ಎಂದು ಹೇಳಿ ಇವೊತ್ತು ಇಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಸದನ ಸಮಿತಿ ಬೇಡ. ಇತಿಹಾಸದಲ್ಲಿ ಮೊದಲ ಬಾರಿಗೆ ನೀವು ನಮಗೆ ರಕ್ಷಣೆಯನ್ನು ಕೊಡಬೇಕಲ್ಲಾ ಸ್ವಾಮಿ. ಒಂದು ಕೆಲಸ ಮಾಡಿ. ಉಪಾಧ್ಯಕ್ಷರಿಗೆ ನಾವು ಸಂಪೂರ್ಣ ಸಹಕಾರ ಕೊಡುತ್ತೇವೆ. ಕಾನೂನಿನಲ್ಲಿ ಏನಿದೆ-ಯೋ ಆ ಪುಸ್ತಕ ನಾವೇ ಬರೆದಿರುವುದು. ನೀವೇ ದಯಮಾಡಿ ಮುರ್ನಾಲ್ಕು ಕಡೆ ಹೋಗಿಬನ್ನಿ. ತಿಳಿದುಕೊಳ್ಳಿ, ಇದೊಂದು ವಿಶೇಷ ಸಂದರ್ಭ, ಶಾಸಕರು ಸತ್ಯಕ್ಕೆ ಅಪಚಾರವಾಗಿ ನಡೆದುಕೊಂಡರು ಎಂದು ಅದೂ ಕೂಡ ದಾಖಲೆಯಾಗಿಬಿಡಲಿ. ನಾವ್ಯಾರೂ ಬೇಡ, ಸದನ ಸಮಿತಿ ಬೇಡ, ಅಧಿಕಾರಿ-ಗಳೂ ಬೇಡ, ಉಪಾಧ್ಯಕ್ಷರು ಸದನವನ್ನು ನಡೆಸಲಿ. ಇಲ್ಲದಿದ್ದರೆ ರಾಜ್ಯದ ಜನತೆಯ ಮುಂದೆ ಚುನಾಯಿತ ಪ್ರತಿನಿಧಿಗಳಾದ ನಾವು ಹಗುರವಾಗಿ ಬಿಡುತ್ತೇವೆ. ಜನರ ಸಮಸ್ಯೆಗಳನ್ನು ಬಗೆಹರಿಸು-ವುದಕ್ಕಾಗಿ ನಾವು ಆರಿಸಿಕೊಟ್ಟು ಕಳುಹಿಸಿದ ಇವರಿಗೇ ರಕ್ಷಣೆ ಬೇಕು ಎಂದು ಜನರು ಆಡಿಕೊಂಡು ನಗೆಪಾಟಿಲಿಗೆ ಗುರಿಯಾಗುವಂಥ ಪರಿಸ್ಥಿತಿ ಆಗಬಹುದು. ಆದ್ದರಿಂದ ಇಂಥ ಘಟನೆಗಳು ಮತ್ತೊಮ್ಮೆ ಸದನದಲ್ಲಿ ಪ್ರಸ್ತಾಪವೇ ಆಗಬಾರದು ಎನ್ನುವುದೇ ನನ್ನ ಆಪೇಕ್ಷೆ. ಇಲ್ಲ ಅಂದರೆ ನಾವು ಕಾನೂನು ಕೈಗೆ ತೆಗೆದುಕೊಳ್ಳುತ್ತೇವೆ, ಏನು ಬೇಕೋ ಅದು ಆಗಲಿ ಎನ್ನುವುದಾದರೆ ಅದೇ ಸ್ಥಿತಿಗೆ ಬರಬಹುದು, ಅದು

ನಡೆಯಲಿ ಬಿಡಿ. ಏಕೆ ತಾವು ಒಪ್ಪಬಾರದು, ನಾವು ಹೇಳುತ್ತೇವೆ, ಈ ಸದನದಲ್ಲಿ ವಿರೋಧ ಪಕ್ಷ-ದಲ್ಲಿರುವಂಥ 107-108 ಜನರು ಹೇಳುತ್ತೇವೆ, ಬಿ.ಬಿ. ಶಿವಪ್ಪನವರ ಕೇಸ್‌ನಲ್ಲಿ, ಮಂಜುನಾಥ್ ಸಿ. ಕುನ್ನೂರ್‌ರವರ ಕೇಸ್‌ನಲ್ಲಿ, ಜಯರಾಮಶೆಟ್ಟರು ಮತ್ತು ಸಭಾಪತಿಯವರ ಕೇಸ್‌ನಲ್ಲಿ, ಬಸವ ರಾಜ್ ಕೇಸ್‌ನಲ್ಲಿ, ಒಬ್ಬ ಎಸ್.ಪಿ. ಎಂ.ಎಲ್.ಎ. ವಿರುದ್ಧ ಹೇಳಿಕೆಯನ್ನು ಕೊಡುತ್ತಾನೆ, ಇದೇ ರೀತಿ ಆನೇ-ಕಲ್ ಘಟನೆ. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದು ಇದೊಂದು ವಿಶೇಷ ಸಂದರ್ಭ, ದಯ-ಮಾಡಿ ತಾವು ಹೋಗಿಬನ್ನಿ. ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲರೂ ಇದುವರೆಗೆ ಮಾತನಾಡಿದ್ದನ್ನು ಬಹಳ ತಾಳ್ಮೆಯಿಂದ ಜಾಗ್ರತೆಯಿಂದ ಕೇಳಿದ್ದೇನೆ. ಒಂದು ರೀತಿಯ ವಿಶಿಷ್ಟ ಸನ್ನಿ-ವೇಶದಲ್ಲಿದ್ದೇವೆ. ಮಾನಭಂಗದ ಪ್ರಕರಣದಲ್ಲಿ ಹೆಣ್ಣು ಮಗಳು ಕಂಪ್ಲೇಂಟ್ ಕೊಟ್ಟರೆ ಮಾನಭಂಗ ಆಗಿದ್ದಕ್ಕಿಂತ ಹೆಚ್ಚು ಮಾನದ ನಷ್ಟ ವಿಚಾರಣೆ ಸಂದರ್ಭದಲ್ಲಿ ಆಗುತ್ತದೆ. ಕೋರ್ಟಿಗೆ ಹೋದಾಗ ಆಗುತ್ತದೆ. ನಾವಿಲ್ಲಿ ಶಾಸಕರು ಎಂದರೆ ಎಲ್ಲರೂ ಒಟ್ಟುಗೂಡಿ ಒಂದು ಸಮೂಹ, ಇಲ್ಲಿ ಆ ಕಡೆ-ಯವರು ಇರಬಹುದು ಅಥವಾ ಈ ಕಡೆಯವರು ಇರಬಹುದು, ಒಟ್ಟಾರೆ ಶಾಸನ ಸಭೆಯ ಎಲ್ಲರೂ ಕೂಡಿ ಒಂದು ಸಮೂಹ. ಶಾಸನ ಸಭೆಯ ಸದಸ್ಯರಿಗೆ ಎಲ್ಲೋ ಒಂದು ಕಡೆ ಆತ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ತೊಂದರೆಯಾಗುತ್ತಿದೆ ಅಥವಾ ಅವರಿಗೆ ಸರಿಯಾದ ಗೌರವ ಸಿಗುತ್ತಿಲ್ಲ ಎನ್ನುವ ವಿಚಾರವನ್ನು ಹೆಚ್ಚು ಹೆಚ್ಚು ಇಲ್ಲಿ ಚರ್ಚೆಗೆ ಒಳಪಡಿಸಿ ಅದಕ್ಕೆ ಅವರೊಂದು ಹೇಳಿ ನಾವೊಂದು ಹೇಳಿದರೆ ಇದನ್ನು ನೋಡಿ ನಗತಕ್ಕಂಥವರೂ ಇಲ್ಲೇ ಇದ್ದಾರೆ. ಮತ್ತೆ ನಾವು ಇನ್ನಷ್ಟೂ ಲಘುವಾಗಿಬಿಡುತ್ತೇವೆ. ಆದ್ದರಿಂದ ಮಾನ್ಯ ವಾಟಾಳ್ ನಾಗಾರಾಜ್‌ರವರ ಸಲಹೆಯ ಮೇರೆಗೆ 20 ನಿಮಿಷಗಳ ಕಾಲ ಸದನದ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೇನೆ. ಸಭಾ ನಾಯಕರು, ಸಂಸದೀಯ ವ್ಯವಹಾರಗಳ ಸಚಿವರು, ಮುಖ್ಯಮಂತ್ರಿಗಳು ಎಲ್ಲರೂ ಬರಲಿ. ಅಲ್ಲಿ ಕೊಠಡಿಯಲ್ಲಿ ಕುಳಿತು ನಾವೇ ಚರ್ಚೆ ಮಾಡೋಣ.

(ಸದನವು 11 ಗಂಟೆಗೆ ಮುಕ್ತಾಯಗೊಂಡು ಮತ್ತೆ 11-20ಕ್ಕೆ ಸೇರಲು ನಿರ್ಧರಿಸಿತು).

(ಸದನವು ಪುನಃ 12-40 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ರವರು ತಮ್ಮ ಪೀಠದಲ್ಲಿ ಉಪಸ್ಥಿತರಿದ್ದರು)

ವಿಷಯ (ಅ) ಶಾಸಕರಾದ ಶ್ರೀ ಮಂಜುನಾಥ್ ಸಿ. ಕುನ್ನೂರ್‌ರವರಿಗೆ ಅಸಿಸ್ಟೆಂಟ್ ಎಕ್ಸಿ-ಕ್ಯೂಟಿವ್ ಇಂಜಿನಿಯರ್‌ರಿಂದ ಕೊಲೆ ಬೆದರಿಕೆ. (ಮುಂದುವರಿದ ಚರ್ಚೆ)

ಅಧ್ಯಕ್ಷರು:- ಡೆಪ್ಯುಟಿ ಚೀಫ್ ಮಿನಿಸ್ಟರ್. . .

ಶ್ರೀ ವಾಟಾಳ್ ನಾಗರಾಜ್:- (ಅವರು ಇಲ್ಲದಿರುವುದನ್ನು ಗಮನಿಸಿ) ಕರೆದುಕೊಂಡು ಬರ-ಬೇಕಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಬ್ಯಾಂಡು, ಬಾಜಾ ಹಚ್ಚಿ ಬೇಕಾದರೆ ಕರೆದುಕೊಂಡು ಬರೋಣ.

ಅಧ್ಯಕ್ಷರು:- ಬೇಡ ಬ್ಯಾಂಡ್ ಇರಲಿ. ಬೇರೆ ಸಂದರ್ಭಕ್ಕೆ ಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಸರ್ಕಾರವೇ ಇಲ್ಲವಲ್ಲಾ ಸ್ವಾಮಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ಅವರು ಕೇಳಿದ್ದು 'ಎ' ಟೀಮ್‌ನವರು ಒಬ್ಬರೂ ಇಲ್ಲಿ ಕಾಣುತ್ತಿಲ್ಲ. 'ಬಿ' ಟೀಮ್ ಮಾತ್ರ ಇದ್ದಾರೆ ಎಂದು. ಅದಕ್ಕೆ ಈ ಪ್ರಶ್ನೆ ಸಾಲ್ವ್ ಆಗಬೇಕು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್:- ಇದು ಸಾಲ್ವ್ ಆಗುವುದು ಹೇಗೆ? ಈಗ ನೀವು ಕರೆದಿದ್ದೀರಿ, ಮಾತನಾಡಿದ್ದೀರಿ. ವಿಚಾರವನ್ನು ಪ್ರಸ್ತಾಪ ಮಾಡುವವರು ಯಾರು?

(ಉಪಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಆಗಮಿಸಿದರು)

ಒಬ್ಬ ಮಾನ್ಯ ಸದಸ್ಯರು:- ಈಗ್ಲ ಸರ್ಕಾರ ಬಂತು. ಸರ್ಕಾರ ಬಂತು ಎಂದು ಅಂದು-ಕೊಳ್ಳೋಣವೇ?

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ಅವರು ವೈಸ್‌ಕ್ಯಾಪ್ಟನ್ ಬಂದಹಾಗೆ.

ಶ್ರೀ ಬಿ.ಎ. ಮೊಹಿಯ್ದೀನ್:- ಹೀಗೆ ಹೇಳಿದರೆ ನಮಗೆ ಅವಮಾನ ಮಾಡಿದ ಹಾಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅವರು ಹೇಳಿದ್ದುದು ಸಾಧುವಾಗಿದೆ. ಅವರ ಪರವಾಗಿ ಬೇಕಾ-ದರೆ ಹಕ್ಕುಚ್ಯುತಿ ತರೋಣ.

(ಗೊಂದಲ)

ಶ್ರೀ ಕೆ.ಬಿ. ಶಾಣಪ್ಪ:- ಮಾನ್ಯ ಸದಸ್ಯರು, ನಮ್ಮ ಡೆಪ್ಯುಟಿ ಸಿ.ಎಂ. ಬರುತ್ತಿದ್ದಹಾಗೆ 'ಈಗ ಬಂತು' ಅಂದರು. ಹಾಗೆಂದರೆ ಏನು? ಇದು ಆಫೆನ್ಸೀವ್ ಲಾಂಗ್ವೇಜ್. ಅದನ್ನು ದಯವಿಟ್ಟು ಕಡತ-ದಿಂದ ತೆಗೆಸಬೇಕು.

ಶ್ರೀ ಕೆ.ಬಿ. ಶಾಣಪ್ಪ:- ಬಂತು ಅಂದರೆ ಏನು?

ಶ್ರೀ ಡಿ.ಕೆ. ಶಿವಕುಮಾರ್:- ಸರ್ಕಾರ ಬಂತು ಎಂದು ಹೇಳಿದರು.

ಶ್ರೀ ಕೆ.ಬಿ. ಶಾಣಪ್ಪ:- ಬಂತು ಅಂದರೆ 'ಅದೇನು ಪ್ರಾಣಿನಾ'?

ಶ್ರೀ ಡಿ.ಕೆ. ಶಿವಕುಮಾರ್:- ಪ್ರಿವಿಲೇಜ್ ಮೋಷನ್ ಮೂವ್ ಮಾಡಿ. ತಪ್ಪಿತಸ್ಥರಿಗೆ ಶಿಕ್ಷೆ-ಯಾಗಲಿ.

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ಈಗ ಇಷ್ಟು ಹೊತ್ತು ನಾವೆಲ್ಲಾ ಧರಣಿ ನಡೆಸಿ ಸಾಕಷ್ಟು ಈ ಶಾಸಕರಿಗೆ ಆದಂಥ ಘಟನೆ ಬಗ್ಗೆ ಇಲ್ಲಿ ಧರಣಿ ಮಾಡುತ್ತಿದ್ದೇವೆ. ತಾವು ಸಮಾಲೋಚನೆ ಮಾಡಿ, ಅದನ್ನು ಸಾಲ್ವ್ ಮಾಡೋಣ ಎಂದು ಹೇಳಿದಿರಿ. ತಮ್ಮ ಕೊಠಡಿಗೆ ಬಂದಮೇಲೆ ಅದಕ್ಕೊಂದು

ರೂಪ ಬಂದಿದೆ. ಕನಿಷ್ಟಪಕ್ಷ ಮಾನ್ಯ ಉಪ ಮುಖ್ಯಮಂತ್ರಿಗಳು ಅದರ ಬಗ್ಗೆ ಸ್ವಲ್ಪ ಹೇಳಿಕೆ ಕೊಟ್ಟರೆ ನಾವು ಸಮಾಧಾನವಾಗಿ ಮುಂದಿನ ಕೆಲಸ ಮಾಡುವುದಕ್ಕೆ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಎತ್ತಿರತಕ್ಕಂಥ ಪ್ರಶ್ನೆ ಬಹಳ ಗಂಭೀರವಾಗಿರತಕ್ಕಂಥಾದ್ದು. ಇದರ ಬಗ್ಗೆ ತಮ್ಮ ಕೊಠಡಿಯಲ್ಲಿ ನಮ್ಮನ್ನು ಮತ್ತು ವಿರೋಧಪಕ್ಷದ ಧುರೀಣರನ್ನು ಕರೆಯಿಸಿ, ಚರ್ಚೆ ಮಾಡಲಾಗಿದೆ. ಕೆಲವು ಸಲಹೆಗಳನ್ನು ವಿರೋಧಪಕ್ಷದ ನಾಯಕರು ಕೊಟ್ಟಿದ್ದಾರೆ. ಏನು ಮೂರು ನಾಲ್ಕು ಪ್ರಕರಣಗಳು ಇವೆ, ಸನ್ಮಾನ್ಯ ಮಂಜುನಾಥ ಕುನ್ನೂರು, ಜಯರಾಮಶೆಟ್ಟರು, ಸಭಾಪತಿಯವರದು ಮತ್ತು ಶ್ರೀರಾಮರೆಡ್ಡಿಯವರದ್ದು, ಕಾಶ್ಯಪ್‌ನವರದ್ದು - ಈ ಎಲ್ಲಾ ವಿಚಾರಗಳ ಬಗ್ಗೆ ನಾವೇನು ಚರ್ಚೆ ಮಾಡಿದ್ದೇವೆ, ಅದರ ಹಿನ್ನೆಲೆಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ, ಮತ್ತು ಯಾವುದೇ ಸದಸ್ಯರ ಗೌರವವನ್ನು ಕಾಪಾಡತಕ್ಕಂಥ ಕೆಲಸ, ಅವರಿಗೆ ಅವಮಾನ ಆಗಬಾರದು, ಅವರಿಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವರು ನಿರ್ಭಿತಿಯಿಂದ ಕೆಲಸ ಮಾಡತಕ್ಕಂಥ ವಾತಾವರಣ ಇರಬೇಕು ಎನ್ನುವುದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಆ ದಿಕ್ಕಿನಲ್ಲಿಯೂ ಕೂಡ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದು ಒಂದು, ಅಧ್ಯಕ್ಷರೇ. ಇದು ಒಂದು ತಾಲ್ಲೂಕಿನ ಎಲ್ಲಾ ಅಧಿಕಾರಿಗಳಿಗೂ ಅನ್ವಯಿಸುವ ರೀತಿಯಲ್ಲಿ ಸರ್ಕಾರ ಸ್ಪಷ್ಟ ಆದೇಶವನ್ನು ಕೊಡತಕ್ಕಂಥದ್ದು ಒಳ್ಳೆಯದು. ಏಕೆಂದರೆ ಇಲ್ಲಿ ಪಕ್ಷರಹಿತವಾಗಿದೆ. ಯಾವುದೇ ಪಕ್ಷ ಎನ್ನತಕ್ಕಂಥಾದ್ದು ಅಲ್ಲ. ಎಲ್ಲಾ ತಾಲ್ಲೂಕಿನ ಅಧಿಕಾರ ವರ್ಗ ಹೇಗೆ ಇರಬೇಕು, ಎನ್ನತಕ್ಕಂಥ ಒಂದು ಸ್ಪಷ್ಟ ನೀತಿಯನ್ನು ತಕ್ಷಣ ತಾವು ಕೊಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ:- ಸರ್ಕಾರಿ ಅಧಿಕಾರಿಗಳ ನಡತೆ ಹೇಗೆ ಇರಬೇಕು ಎಂಬುದರ ಬಗ್ಗೆ ಈಗಾಗಲೇ ಅನೇಕ ಸುತ್ತೋಲೆಗಳು ಇವೆ. ಶಾಸಕರು ಹೋದಾಗ ಅಧಿಕಾರಿಗಳು ಯಾವ ರೀತಿ ನಡೆದುಕೊಳ್ಳಬೇಕು, ಸಭೆಗಳಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎಂಬ ಬಗ್ಗೆ ಸುತ್ತೋಲೆಗಳು ಇವೆ. ಇದರ ಬಗ್ಗೆ ಮತ್ತೊಮ್ಮೆ ಸರ್ಕಾರ ಗಮನ ಹರಿಸುತ್ತದೆ ಎನ್ನತಕ್ಕಂಥ ಮಾತನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಶಿವಶಂಕರಪ್ಪ ಕಾಶ್ಯಪ್‌ನವರ್:- ಉಪಮುಖ್ಯಮಂತ್ರಿಗಳು ನನ್ನ ಹೆಸರು ಪ್ರಸ್ತಾಪ ಮಾಡಿಲ್ಲ.

ಅಧ್ಯಕ್ಷರು:- ಹೇಳಿದ್ದಾರಲ್ಲಾ ಎಲ್ಲಾ ಸೇರಿಸಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಉಪಮುಖ್ಯಮಂತ್ರಿಗಳು ಸರ್ಕಾರದ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಬಹಳ ನೋವು ಉಂಟು ಮಾಡತಕ್ಕಂಥ ಒಂದು ಪ್ರಸಂಗ. ಶಾಸಕರಾಗಿ ಇರತಕ್ಕಂಥವರು ತಮ್ಮ

ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಅಡ್ಡಿ ಉಂಟಾಗಿದೆ ಎಂದು ಹೇಳತಕ್ಕಂಥಾದ್ದು ಅಥವಾ ತಮ್ಮ ಕರ್ತವ್ಯ ನಿರ್ವಹಣೆಗೆ ಸಾಕಷ್ಟು ನ್ಯಾಯಬದ್ಧವಾದ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ಹೇಳಿ ಅದಕ್ಕೆ ಅವಕಾಶವನ್ನು ಕೇಳಿ, ರಕ್ಷಣೆ ಕೇಳಿ ಮೊರೆ ಹೋಗತಕ್ಕಂಥಾದ್ದು ನಮಗೆ ಯಾರಿಗೂ ಗೌರವ ತರತಕ್ಕಂಥ ವಿಷಯ ಅಲ್ಲ. ಸುದೀರ್ಘವಾಗಿ ಎಲ್ಲಾ ಪ್ರತಿಪಕ್ಷಗಳ ಮುಖಂಡರುಗಳು, ಮತ್ತು ಕೆಲವು ಶಾಸಕರು, ನೊಂದ ಶಾಸಕರು ಇದ್ದರು. ಅವರನ್ನು ಕೂಡ ಇಟ್ಟುಕೊಂಡು, ಸರ್ಕಾರದ ಪ್ರತಿನಿಧಿಗಳನ್ನು ಇಟ್ಟುಕೊಂಡು ಚರ್ಚೆ ಮಾಡಿದ್ದೇವೆ. ಸರ್ಕಾರ ಕೂಡ ಮುಕ್ತ ಮನಸ್ಸಿನಿಂದ ಎಲ್ಲೆಲ್ಲಿ ಅಚಾತುರ್ಯ ನಡೆದಿದೆ, ಅದನ್ನು ಸರಿಪಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ. ಕೇವಲ ಆಶ್ವಾಸನೆ ಅಲ್ಲ. ನಾನು ಶಾಸಕರಿಗೂ ಒಂದು ಮಾತು ಹೇಳುತ್ತೇನೆ ಮತ್ತು ಸರ್ಕಾರಕ್ಕೂ ಒಂದು ಮಾತು ಹೇಳುತ್ತೇನೆ. ಶಾಸಕರಾಗಿ ಇರತಕ್ಕಂಥವರು ನಾವು ವಿಶಿಷ್ಟವಾಗಿ ಶಾಸನಸಭಾ ಸದಸ್ಯರಾಗಿ ಕರ್ತವ್ಯ ನಿರ್ವಹಣೆ ಜವಾಬ್ದಾರಿಗಷ್ಟೇ ಆ ಶಾಸಕಸ್ಥಾನವನ್ನು ಮೀಸಲಾಗಿಡಬೇಕು. ಉಳಿದೆಲ್ಲ ವಿಚಾರಗಳಿಗೆ ಸಾಮಾನ್ಯ ಪ್ರಜೆಗಳಿಗೆ ಇರತಕ್ಕಂಥ ಸೌಲಭ್ಯಗಳು ಇರುತ್ತವೆಯೇ ಹೊರತು ಯಾವ ವಿಶೇಷ ಸೌಲಭ್ಯಗಳಿಗೆ ನಾವೇನೂ ಅರ್ಹರಲ್ಲ. ನಮ್ಮ ನಡತೆಯಿಂದಾಗಿ ನಾವು ಜನಸಾಮಾನ್ಯರ ಗೌರವ ಮತ್ತು ಪ್ರೀತಿಗಳಿಗೆ ಒಳಗಾಗಬೇಕೇ ಹೊರತು ಶಾಸಕರು ಅನ್ನುವಷ್ಟಕ್ಕೇ ಮಾತ್ರ ನಾವು ಗೌರವ, ಪ್ರೀತಿಗಳನ್ನು ಅಪೇಕ್ಷಿಸಬಾರದು. ನಮ್ಮ ಜೀವನಾವಧಿಯಲ್ಲಿ ಶಾಸಕರು ಅಲ್ಲದೇನೇ ನಾವು ಬದುಕಬೇಕಾಗುತ್ತದೆ. ಈ ಅಂಶವನ್ನು ನಾವು ಯಾರೂ ಕೂಡ ಮರೆಯಬಾರದು. ನಮಗೆ ಮೊದಲು ಶಾಸಕರಾಗಿದ್ದಂಥವರು, ಮಂತ್ರಿಗಳು ಆಗಿದ್ದಂಥವರು ಸಾರ್ವಜನಿಕ ಬದುಕಿಗೆ ಯಾವ ಒಂದು ಗೌರವವನ್ನು ತಂದಿದ್ದರು, ಅದು ನಮಗೆ ಆದರ್ಶವಾಗಬೇಕು. ತಾವು ಯಾರೂ ಆ ರೀತಿ ನಡೆದುಕೊಳ್ಳುತ್ತಿಲ್ಲ ಎನ್ನುವ ಅಭಿಪ್ರಾಯ ಇಟ್ಟುಕೊಂಡು ನಾನು ಹೇಳುತ್ತಿಲ್ಲ. ನಾವು ಹೀಗೆ ಹೋಗತಕ್ಕಂಥಾದ್ದು ಒಳ್ಳೆಯದು ಎನ್ನತಕ್ಕಂಥ ಮಾತನ್ನು ನನ್ನ ಎಲ್ಲಾ ಸಹದ್ಯೋಗಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರಕ್ಕೂ ಕೂಡ ನಾನು ಇಷ್ಟೇ ಹೇಳತಕ್ಕಂಥಾದ್ದು. ಅಧಿಕಾರ ಎರಡನೇ ವಿಚಾರ. ತಾವು ಕೂಡ ಮೂಲಭೂತವಾಗಿ ಶಾಸಕರು. ಶಾಶ್ವತವಾಗಿ ಅಧಿಕಾರ ಯಾರೊಬ್ಬರ ಕೈಲೂ ಇರುವುದಿಲ್ಲ. ನಮ್ಮ ಸಹೋದ್ಯೋಗಿಗಳಾದಂಥ ಶಾಸಕರೇ ಕೆಲವು ಸನ್ನಿವೇಶದಲ್ಲಿ, ಅವರ ಮನಸ್ಸಿಗೆ ನೋವುಂಟಾಗತಕ್ಕ ಪ್ರಸಂಗವನ್ನು ನಮ್ಮ ಗಮನಕ್ಕೆ ತಂದಾಗ, ಸಕ್ಷಾತೀತವಾಗಿ, ಸಂದರ್ಭಕ್ಕನುಸಾರವಾಗಿ, ಎಲ್ಲಿ ಒಬ್ಬ ಶಾಸಕರ ಮೂಲಭೂತ ಗೌರವ ರಕ್ಷಣೆ ಮಾಡತಕ್ಕ ಸನ್ನಿವೇಶ ಒದಗಿ ಬರುತ್ತದೆಯೋ ಅಲ್ಲಿ ತಕ್ಷಣ ತಾವು ಕ್ರಮ ಜರುಗಿಸಬೇಕು. ಈ ರೀತಿ ಮಾಡತಕ್ಕಂಥ ಒಂದು ವಾತಾವರಣ ಸೃಷ್ಟಿಯಾಗಿ, ಆ ಒಂದು ನಂಬಿಕೆ ನಿಮ್ಮ ನಡವಳಿಕೆಗಳ ಮೇಲೆ ಅವರಿಗೆ ಬಂದಾಗ, ಈ ರೀತಿ ಪದೇ ಪದೇ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ಅವಕಾಶ ಇರುವುದಿಲ್ಲ. ಆ ರೀತಿ ತಾವು ಮಾಡುತ್ತೀರಿ ಎನ್ನತಕ್ಕಂಥ ನಂಬಿಕೆ ಕೂಡ ಇದೆ. ಕೆಲವು ಅಧಿಕಾರಿಗಳು, ಕೆಲವು ಸಂದರ್ಭಗಳಲ್ಲಿ ಬಹಳ ಚಾಣತನದಿಂದ ಯಾರು ಆಡಳಿತದಲ್ಲಿರುತ್ತಾರೆ ಅವರ ಜೊತೆಯಲ್ಲಿ ನೆಂಟಸ್ತಿಕೆ ಬೆಳೆಸಿ, ಬಂಧುತ್ವ ಬೆಳೆಸಿ ತಮ್ಮದು ಯಾವುದೋ ಒಂದು ನಿರ್ಬಂಧವನ್ನು ತಂದು, ಅಧಿಕಾರದಲ್ಲಿರತಕ್ಕವರ ಮೇಲೆ ಹೇರಿ,

ತಾವು ಮಾಡತಕ್ಕಂಥ ತಪ್ಪುಗಳಿಗೆ ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಪಡತಕ್ಕಂಥದ್ದನ್ನು ನಾವು ನೋಡುತ್ತಾ ಬಂದಿದ್ದೇವೆ. ಇದು ಕೆಳ ಹಂತದ ಅಧಿಕಾರಿಗಳ ವಿಷಯಕ್ಕೆ ಹೆಚ್ಚಾಗಿ ಅನ್ವಯಿಸುತ್ತದೆ. ಆ ವಿಚಾರದಲ್ಲಿ ಆಡಳಿತದಲ್ಲಿರುವವರೂ ಕೂಡ ಸ್ವಲ್ಪ ಹೆಚ್ಚು ಜವಾಬ್ದಾರಿಯಿಂದ ನಡೆದುಕೊಳ್ಳತಕ್ಕ ಮನವಿಯನ್ನು ಕೂಡ ನಾನು ಮಾಡಿಕೊಳ್ಳುತ್ತೇನೆ. ಇಡೀ ರಾಜ್ಯದ ಜನ ನಮ್ಮ ಬಂಧುಗಳು. ಇದನ್ನು ಹೊರತಾಗಿ ಬೇರೆ ಯಾವ ಆಧಾರಗಳನ್ನೂ ಇಟ್ಟುಕೊಳ್ಳಬಾರದು. ಸಮಾಜ, ಸಂಬಂಧ ಇವರನ್ನೆಲ್ಲರೂ ಕೂಡ, ಯಾರು ಅಧಿಕಾರದಲ್ಲಿದ್ದರೆ, ಅವರು ಈ ಸಂಬಂಧ ಬೆಳೆಸತಕ್ಕಂಥ ಜನ ಅವರು. ಇವತ್ತು ನೀವು ಇಲ್ಲದೇ ಹೋದರೆ, ನಾಳೆ ಇನ್ನೊಬ್ಬರು ಬಂದರೆ, ಅವರಿಗೆ ಸಂಬಂಧ ಯಾರಿರಬಹುದೋ ಅವರನ್ನು ಹುಡುಕಿ ಸಂಬಂಧ ಬೆಳೆಸುತ್ತಾರೆ. ಈ ಕೆಳ ಹಂತದ ಆಡಳಿತ ವಿಚಾರ ಬಂದಾಗ ಸ್ವಲ್ಪ ಹೆಚ್ಚು ಕಠಿಣವಾಗಿ, ನಿರ್ದಾಕ್ಷಿಣ್ಯವಾಗಿ ನಡೆದುಕೊಂಡರೆ, ಜನತೆಗೆ ಆಡಳಿತದಲ್ಲಿ ಹೆಚ್ಚು ವಿಶ್ವಾಸ ಬರುತ್ತದೆಂಬ ಮಾತನ್ನು ಹೇಳುತ್ತೇನೆ, ಮತ್ತು ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ತಾವೆಲ್ಲರೂ ಸಹಕರಿಸಿದ್ದೀರಿ. ಈಗಾಗಲೇ ಸಾಕಷ್ಟು ಸಮಯವನ್ನು ಕಳೆದುಕೊಂಡಿದ್ದೇವೆ. ನಿನ್ನೆಯೂ ಹೋಯಿತು, ಇವತ್ತೂ ಹೋಯಿತು. ದಯಮಾಡಿ ಮತ್ತೆ, ಮತ್ತೆ ಈ ರೀತಿಯ ಪ್ರಸಂಗಕ್ಕೆ ಅವಕಾಶ ಕೊಡಲಾರದಂತೆ ನಾವು ಸಭೆಯನ್ನು ನಡೆಸಿಕೊಂಡು ಹೋಗುವುದಕ್ಕೆ ತಾವೆಲ್ಲರೂ ಸಹಕರಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತು ನಾವು ಪ್ರಶ್ನೋತ್ತರವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಪ್ರಶ್ನೋತ್ತರ ಹೋದಂತೆ. ದಯಮಾಡಿ ಸದಸ್ಯರು ಸಹಕರಿಸಬೇಕು. ಏಕೆಂದರೆ, ನಿನ್ನೆ ಸಮಯ ಕಳೆದು ಕೊಂಡಿದ್ದೇವೆ. ಇವತ್ತು ಕೂಡ ಸಮಯ ಕಳೆದುಕೊಂಡಿದ್ದೇವೆ. ಪ್ರಶ್ನೋತ್ತರ ತೆಗೆದುಕೊಂಡರೆ ಆಗುವುದಿಲ್ಲ. ದಯಮಾಡಿ, ಪ್ರಶ್ನೋತ್ತರ ಸ್ಕಿಪ್ ಮಾಡಿ ಮುಂದೆ ಹೋಗೋಣ.

ಒಬ್ಬ ಮಾನ್ಯ ಸದಸ್ಯರು:- ನಮ್ಮ ಪ್ರಶ್ನೆಗಳು ಬರುವುದೇ ಅಪರೂಪ. ಇವತ್ತೂ ಹೋದರೆ, ಮತ್ತೆ ಇನ್ನೆಲ್ಲಿ ಬರುತ್ತವೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ದಯಮಾಡಿ, ಉಪ ಪ್ರಶ್ನೆಗೆ ಅವಕಾಶ ಕೊಡಬೇಡಿ. ನೇರವಾಗಿ ಒಂದೊಂದೇ ಕೇಳಿ, ಬೇಗ ಮುಗಿಸಿ. ಪ್ರಶ್ನೋತ್ತರ ಮುಖ್ಯವಾದುದರಿಂದ, ನಾವು ಪ್ರಾರಂಭದಲ್ಲೇ ಇದನ್ನು ಪ್ರಸ್ತಾಪ ಮಾಡಿದೆವು. ಅರ್ಧ ಗಂಟೆಯಲ್ಲಿ ಮುಗಿಸೋಣ.

ಅಧ್ಯಕ್ಷರು:- ಹಾಗಾದರೆ ಪ್ರಶ್ನೋತ್ತರ ಪ್ರಾರಂಭ ಮಾಡೋಣ. ದಯಮಾಡಿ ಎಲ್ಲರೂ ಸಹಕರಿಸಿ.